The motion was adopted and the leave granted

SMT. E. E. VAZ.— I introduce the Karnataka State Stamp (Amendment) Bill, 1975.

MADAM SPEAKER.—The Karnataka Stamp (Amendment) Bill 1975 is introduced*.*

Private Member's Resolutions

Re: Appointment of a judjical Commission to examine and sebmit a report to check correption at all levels in Government and other concerns Debate Continued)

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ) —ಸನ್ಮಾನ್ಯ ಅಧ್ಯಕ್ಷಿಣಿಯರೇ, ಮೊನ್ನೆ ಈ ಲಂಚ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕೆ ಹಾಗೂ ಕಛೇರಿಗಳಲ್ಲಿ ಕೆಲಸವನ್ನು ಶ್ರದ್ಧೆ ಮತ್ತು ನಿಷ್ಠೆಯಿಂದ ನಡೆಯುವುದಕ್ಕೆ ಒಂದು ನ್ಯಾಯಾಂಗ ಆಯೋಗವನ್ನು ನೇಮಕ ಮಾಡಬೇಕೆಂದು ಒಂದು ಖಾಸಗೀ ನಿರ್ಣಯವನ್ನು ಇಲ್ಲಿ ಮಂಡನೆ ಮಾಡಿ ಆ ಬಗ್ಗೆ ನನ್ನ ಭಾಷಣವನ್ನು ಪ್ರಾರಂಭ ಮಾಡಿದ್ದೆ ; ಅದನ್ನು ಮುಕ್ತಾಯ ಮಾಡುವುದಕ್ಕೆ ಇನ್ನೂ ಕೆಲವು ಅಂಶಗಳನ್ನು ಹೇಳುವುದಕ್ಕೆ ತಮ್ಮ ಅನುಮತಿ ಕೇಳುತ್ತೇನೆ. ಸಾಧಾರಣವಾಗಿ ಭ್ರಷ್ಟಾಚಾರ ಮತ್ತು ಲಂಚದ ಹಾವಳಿ ಪ್ರಾರಂಭವಾಗುವುದಕ್ಕೆ ನನಗೆ ಗೊತ್ತಿರುವಂತೆ ೩ ಕಾರಣಗಳಿವೆ. ಒಂದು, ಕೆಲವರಿಗೆ ಆದಷ್ಟೂ ಹಣವನ್ನು ದೋಚಿಕೊಳ್ಳಬೇಕು, ಆ ಮೂಲಕ ತಲೆ ತಲಾಂತರದವರೆಗೆ ಆಸ್ತಿ ಉಳಿದುಕೊಂಡು ಬರಬೇಕೆಂಬ ಕಾರಣದಿಂದ ಅಪಾರವಾದ ಆಸ್ತಿಯನ್ನು ಮಾಡ ಬಹುದು; ಮತ್ತೆ ಕೆಲವರಿಗೆ ದುಷ್ಟ ಚಟಗಳಿದ್ದು, ಅವುಗಳನ್ನು ತೀರಿಸಿಕೊಳ್ಳುವುದಕ್ಕೆ ತಮ್ಮ ಒಂದು ವರಮಾನ ಸಾಕಾಗದೇ ಇದ್ದಾಗ...

ಶ್ರೀ ಎಚ್. ಡಿ ದೇವೇಗೌಡ.— ದುಡ್ಡು ಜಾಸ್ತಿಯಿದ್ದರೆ ಚಟಗಳು ಪ್ರಾರಂಭವಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಚಟಗಳಿಗಾಗಿ ಹಣ ಸಂಪಾದನೆ ಮಾಡುತ್ತಾರೆಂದು ಹೇಳುತ್ತಾರೆ; ಇದರಲ್ಲಿ ಯಾವುದು ಸರಿ?

ಶ್ರೀ ಟಿ. ಆರ್. ಶಾಮಣ್ಣ.— ಎರಡು ತರಹವೂ ಆಗಬಹುದು, ಅದರಲ್ಲಿಯೂ ಮುಖ್ಯವಾಗಿ ಹೆಣ್ಣು, ಹೊನ್ನು, ಮಣ್ಣು, ಮಧ್ಯ, ಜೂಜು ಇವುಗಳ ಒಂದು ಸಹವಾಸದಿಂದ ಅನೇಕ ಸಾರಿ ಕೆಲವರು ದಾರಿ ಬಿಟ್ಟು ಹೋಗುವ ಸಂದರ್ಭಗಳಿರುತ್ತವೆ. ಹಾಗೆಯೇ ಕೆಲವರು ತಮ್ಮ ಒಂದು ಅಧಿಕಾರದಾಹ ಕ್ಕಾಗಿ, ತಮ್ಮ ಸ್ಥಾನಮಾನಗಳನ್ನು ಉಳಿಸಿಕೊಳ್ಳುವುದಕ್ಕೆ, ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದಕ್ಕೆ ಹಾಗೂ ತಮ್ಮ ಪಕ್ಷವನ್ನು ಉಳಿಸಿಕೊಳ್ಳುವುದಕ್ಕೆ ಈ ಸರ್ಕಾರವೇ ಅಲ್ಲ ಹಿಂದಿನ ಸರ್ಕಾರಗಳೂ ಸಹ, ಜೊತೆಗೆ ತಮಿಳುನಾಡಿನಲ್ಲಿರುವ ಡಿ. ಎಂ ಕೆ. ಸರ್ಕಾರ, ಕೇರಳದಲ್ಲಿರುವ ಕಮ್ಯುನಿಸ್ಟ್ ಸರ್ಕಾರ ಅನೇಕ ಸಂದರ್ಭಗಳಲ್ಲಿ ದಾರಿ ತಪ್ಪಿ ಕೆಲವು ವ್ಯವಹಾರಗಳನ್ನು ಮಾಡಬೇಕಾದ ಪರಿಸ್ಥಿತಿಯನ್ನು ನಾವು ಅನೇಕ ಸಂದರ್ಭಗಳಲ್ಲಿ ನೋಡಿದ್ದೇವೆ. ಅದರಲ್ಲಿಯೂ ಮುಖ್ಯವಾಗಿ ಚುನಾವಣೆಗಳು ನಡೆಯುವ ಸಂದರ್ಭಗಳಲ್ಲಿ ಯಾವುದೇ ಆಡಳಿತ ಪಕ್ಷ ಅಧಿಕಾರದಲ್ಲಿರಲಿ, ಚುನಾವಣೆಗೋಸ್ಕರ ಸಾಧಾರಣವಾಗಿ ಹೆಚ್ಚು ಹಣವನ್ನು ಭ್ರಷ್ಟಾಚಾರದಿಂದ ಒದಗಿಸಿಕೊಳ್ಳುವ ಅವಕಾಶಗಳನ್ನು ಅನೇಕರು ನೋಡಿದ್ದಾರೆ. ಅದರಲ್ಲಿ ನಿಮ್ಮಂತಹ ನಿಷ್ಠೆಯುಳ್ಳ ಅಧ್ಯಕ್ಷರಂತಹವರು ಜನರ ಒಂದು ಪ್ರೀತಿ ವಿಶ್ವಾಸವನ್ನು ಗಳಿಸಿಕೊಳ್ಳುವುದಕ್ಕಾಗಿ ಚುನಾ ವಣೆಯ ಸಂದರ್ಭಗಳಲ್ಲಿ ತಮ್ಮ ಹಣವನ್ನೇ ಖರ್ಚು ಮಾಡಿದರೆ ಬೇರೆಯವರು ಸಾಧಾರಣವಾಗಿ ಭ್ರಷ್ಟಾ ಚಾರದಿಂದ ಗಳಿಸಿದಂತಹ ಹಣವನ್ನೇ ಖರ್ಚು ಮಾಡಿ ಚುನಾವಣೆಯಲ್ಲಿ ಗೆಲ್ಲಬೇಕಾದ ಪರಿಸ್ಥಿತಿ ಬರುತ್ತದೆ. ಮೊನ್ನೆ ವಿಶ್ವವಿದ್ಯಾನಿಲಯದಲ್ಲಿ ನಡೆದ ಚುನಾವಣೆಯಲ್ಲಿ ವಿದ್ಯಾರ್ಥಿಗಳಲ್ಲಿ ಪೈಪೋಟಿ ಬಂದು ಕೆಲವರು ಸಹಸ್ರಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡಿದರೆಂದು ಹೇಳುತ್ತಾರೆ. ಚುನಾವಣೆಯ ಸಂದರ್ಭಗಳಲ್ಲಿ ವಿಪರೀತವಾಗಿ ಹಣ ವ್ಯಯವಾಗುತ್ತದೆ. ಅದಕ್ಕಾಗಿ ಕೆಲವರಿಗೆ ಹಣ ಸಂಪಾದನೆ ಮಾಡಲು ದಾರಿಬಿಟ್ಟು ಹೋಗುವ ಸಂದರ್ಭ ಬರುತ್ತದೆ. ಮೊನ್ನೆ ಅರಸೀಕೆರೆಯಲ್ಲಿ ನಡೆದ ಚುನಾವಣೆಯ ಸಂದರ್ಭದಲ್ಲಿ ಹಣದ ಹೊಳೆ ಹರಿಯಿತು ಎಂದು ಜನರು ಹೇಳುತ್ತಾರೆ. ನಾನು ಆ ಸಂದರ್ಭದಲ್ಲಿ ಅಂದರೆ ಚುನಾವಣೆ ನಡೆಯುವುದು ಎರಡು ದಿನಗಳಿರುವಾಗ ಶೃಂಗೇರಿಗೆ ಹೋಗುವಾಗ ದಾರಿಯಲ್ಲಿ ಕೆಲವರು ಏನು ಹೇಳಿದ ರೆಂದರೆ, ಹಣದ ಪ್ರಭಾವದಿಂದ ಆಡಳಿತ ಪಕ್ಷ ಆರಿಸಿ ಬರಬಹುದು, ಇಲ್ಲದಿದ್ದರೆ ಬೇರೆ ಪಕ್ಷ ಆರಿಸಿ

ಬರಬಹುದೆಂದು ಹೇಳಿದರು. ಸಾಧಾರಣವಾಗಿ ಇಂದು ಆಡಳಿತ ಪಕ್ಷದಿಂದ ಎಂ. ಎಲ್. ಎ. ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಂತರೆ, ಅವರಿಗೆ ೫ ರಿಂದ ೨೦ ಸಾವಿರ ರೂಪಾಯಿಗಳನ್ನು ಒದಗಿಸುವುದು, ಪಾರ್ಲಿಮೆಂಟ್ ಎಲೆಕ್ಷನ್‌ಗೆ ನಿಂತರೆ ಒಂದು ಲಕ್ಷ ರೂಪಾಯಿಗಳನ್ನು ಅನೇಕ ಸಂದರ್ಭಗಳಲ್ಲಿ ಪಕ್ಷದವರು ಒದಗಿಸುತ್ತಾರೆ. ನಾನು ಚುನಾವಣೆಗೆ ನಿಂತರೆ ನನ್ನ ಸ್ವಂತದ ಹಣವನ್ನು ಖರ್ಚು ಮಾಡುತ್ತೇನೆ. ಕೆಲವು ಅಭಿಮಾನಿಗಳು ಹಣ ತಂದುಕೊಡುವುದೂ ಉಂಟು. ಆದರೆ ವಿರೋಧಪಕ್ಷದಿಂದ ನಿಂತುಕೊಳ್ಳತಕ್ಕ ಅಭ್ಯರ್ಥಿಗಳಿಗೆ ಹಣದ ಬೆಂಬಲ ಅಷ್ಟು ಇರುವುದಿಲ್ಲ. ವಿರೋಧಪಕ್ಷದವರಿಗೆ ಹಣದ ಸಹಾಯ ಮಾಡಿದರೆ ಮುಂದೆ ತಮಗೆ ಅವರಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಹಣದ ಸಹಾಯವನ್ನು ಜನರು ಮಾಡುವುದಿಲ್ಲ. ಅದೇ ಆಡಳಿತ ಪಕ್ಷದ ಅಭ್ಯರ್ಥಿಗಳಿಂದ ತಮಗೆ ಒಂದು ರೂಪಾಯಿಯ ಲಾಭ ಬರುತ್ತದೆಂದು ಗೊತ್ತಾದರೆ ನಾಲ್ಕಾಣೆಯನ್ನು ಕೊಡುತ್ತಾರೆ. ಒಟ್ಟಿನಲ್ಲಿ ಹಿಂಗಿಗೆ ಸಿಕ್ಕಿಕೊಂಡು ಅನೇಕ ಸಲ ಭ್ರಷ್ಟಾಚಾರ ಮಾಡುವ ಸಂದರ್ಭ ಬರುತ್ತದೆ. ಇದು ಹೋಗಬೇಕಾದರೆ ಚುನಾವಣಾ ಪದ್ಧತಿಯಲ್ಲಿಯೇ ಬದಲಾವಣೆಯಾಗಬೇಕೆಂಬ ಕೂಗು ಅನೇಕ ಕಡೆಗಳಿಂದ ಕೇಳಿಬರುತ್ತಿದೆ. ಅದನ್ನು ಯಾವ ರೀತಿ ಬದಲಾವಣೆ ಮಾಡಬೇಕೆಂಬುದನ್ನು ಎಲ್ಲರೂ ಕೂತು ಯೋಚನೆ ಮಾಡಬೇಕಾಗಿದೆ. ಅದನ್ನು ಮಾಡದಿದ್ದರೆ ಕೇವಲ ಹಣವಿರುವವರು ಮತ್ತು ಪ್ರಭಾವ ಬೀರತಕ್ಕವರು ಮಾತ್ರ ಚುನಾವಣೆಯಲ್ಲಿ ಆರಿಸಿ ಬರುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಸರ್ವೇಸಾಮಾನ್ಯರಾದವರು ಆರಿಸಿ ಬರುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಹಣದ ಪ್ರಭಾವವನ್ನು ನಿಲ್ಲಿಸದೇ ಹೋದರೆ ಚುನಾವಣೆಯನ್ನು ಸರಿಯಾಗಿ ನಡೆಸುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ. ಇಂದು ರಾಜಕೀಯ ರಂಗದಲ್ಲಿ ಯಾರು ಅಧಿಕಾರದಲ್ಲಿದ್ದಾರೆ, ಅವರ ಒಂದು ಅಧಿಕಾರದಾಹ ಮತ್ತು ಹಣದ ದಾಹ ಸಾಧಾರಣವಾಗಿ ಚುನಾವಣೆಯ ಸಂದರ್ಭದಲ್ಲಿ ಹೆಚ್ಚಿನ ಭಾಗ ವಹಿಸುತ್ತದೆಂದು ಹೇಳಿದರೆ ತಪ್ಪಾಗಲಾರದು. ಇದನ್ನು ತಡೆಗಟ್ಟಬೇಕಾದರೆ ಮತ್ತು ಬೇರೆಯವರಿಗೆ ಮಾರ್ಗದರ್ಶನ ಮಾಡಬೇಕಾದರೆ, ನಿಷ್ಠೆಯುಳ್ಳವರು ಇದರಲ್ಲಿ ನಿಷ್ಪಕ್ಷಪಾತರಾಗಿ ನಡೆದುಕೊಳ್ಳಬೇಕಾಗುತ್ತದೆ. ಮೊನ್ನೆ ಬೆಂಗಳೂರಿನಲ್ಲಿ ಜೆ.ಪಿ. ಯವರ ಒಂದು ಚಳುವಳಿ ನಡೆದಾಗ, ಒಂದು ಮನವಿ ಪತ್ರವನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಿಸುವುದಕ್ಕೆ ಹೋದ ಸಂದರ್ಭದಲ್ಲಿ ಅವರು ಏನು ಹೇಳಿದರೆಂದರೆ ಖಾಸಗೀ ಆಸ್ತಿಯನ್ನು ಇಟ್ಟುಕೊಳ್ಳಲು ಯಾರಿಗೂ ಅಧಿಕಾರವಿರಬಾರದೆಂದು ಜೆ.ಪಿ. ಯವರು ಹೇಳುವುದಾದರೆ ಅವರ ಒಂದು ಚಳುವಳಿಗೆ ನಾನು ಮೊದಲು ಸೇರಿಕೊಳ್ಳುತ್ತೇವೆ ಎಂದು. ನಾನು ನನ್ನ ಖಾಸಗೀ ಆಸ್ತಿಯನ್ನು ಬಿಟ್ಟುಕೊಡುವುದಕ್ಕೆ ಸಿದ್ಧವಿಲ್ಲ, ಆದರೆ ಅಂತಹ ಅವಕಾಶಬಂದರೆ ನಾನು ಬಿಟ್ಟುಕೊಡುತ್ತೇನೆ. ಬೇಕಾದರೆ ನಾನು ಆಡಳಿತ ನಡೆಸುತ್ತಿರುವವರ ಪೈಕಿ ೧೦–೧೫ ಜನರ ಹೆಸರುಗಳನ್ನು ಹೇಳುತ್ತೇನೆ, ಅವರುಗಳಿಗೆ ಸೋಷಿಯಲಿಜಂ ಬಗ್ಗೆ ಅಪಾರವಾದ ನಂಬಿಕೆ ಇದ್ದರೆ ತಮ್ಮ ಆಸ್ತಿಯನ್ನು ಮತ್ತು ತಮ್ಮ ಸಾರ್ವಭೌಮತ್ವವನ್ನು ಬಿಟ್ಟುಕೊಟ್ಟರೆ, ನಾನು ಅವರ ಪಾರ್ಟಿಗೆ ಸೇರಿಕೊಂಡು ಅವರ ಆಫೀಸಿನ ಕಸ ಗುಡಿಸಿಕೊಂಡು ಇರುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಹೆಸರುಗಳನ್ನು ಹೇಳಿ.

ಶ್ರೀ ಟಿ. ಆರ್. ಶಾಮಣ್ಣ.—ಅವರು ಒಪ್ಪಿಕೊಳ್ಳುವುದಾದರೆ ನಾನು ಹೆಸರುಗಳನ್ನು ಹೇಳುತ್ತೇನೆ.

ಆದ್ದರಿಂದ ಇದರಲ್ಲಿ ಇನ್ನೂ ಕೆಲವು ಕಾರಣಗಳಿಂದ ಲಂಚರುಷತ್ತುಗಳು ಹೆಚ್ಚಾಗುವುದಕ್ಕೆ ಅನೇಕ ಕಾರಣಗಳಿವೆ. ಇದರ ಮುಖ್ಯವಾಗಿ ನಾನು ಎಲ್ಲಾ ಹೊಣೆಗಾರಿಕೆಯನ್ನೂ ಸರ್ಕಾರದ ಮೇಲೆ ಹಾಕುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ಸಾರ್ವಜನಿಕರ ಒಂದು ಹೊಣೆಗಾರಿಕೆಯೂ ಇದೆ. ಅನೇಕರು ತಮ್ಮ ಕೆಲಸಕಾರ್ಯಗಳನ್ನು ಮಾಡಿಸುವುದಕ್ಕೋಸ್ಕರ ತಮ್ಮ ಹಿತವನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ಅಧಿಕಾರದಲ್ಲಿರತಕ್ಕವರನ್ನು ತಪ್ಪು ದಾರಿಯಲ್ಲಿ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಇದರಲ್ಲಿ ಅನೇಕಸಾರ್ವಜನಿಕರು ಭಾಗಿಗಳಾಗಿರುತಾರೆ. ಆಕ್ರಮವಾಗಿರುತ್ತಾರೆ. ಆಕ್ರಮವಾಗಿ ಕೆಲಸವನ್ನು ಮಾಡಿಸಿಕೊಳ್ಳುವ ದೃಷ್ಟಿಯಿಂದ ಸಾರ್ವಜನಿಕರು ಲಂಚವನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ನ್ಯಾಯವಾಗಿ ಕೆಲಸ ಮಾಡುತ್ತಾನೆ ಎನ್ನುವ ದಿಟ್ಟತನ ಇದ್ದರೆ ಲಂಚತನ್ನಷ್ಟಕ್ಕೆ ತಾನೆ ಹೋಗುತ್ತದೆ. ಆದ್ದರಿಂದ ಲಂಚಗುಳಿತನದ ಜವಾಬ್ದಾರಿ ಹೊಣೆಗಾರಿಕೆ ಸಾರ್ವಜನಿಕರ ಮೇಲೆಯೂ ಇದೆ. ಸಾರ್ವಜನಿಕರು ದುಡ್ಡು ಕೊಡುವುದಿಲ್ಲ ಎನ್ನುವ ಮನೋಭಾವನೆ ಬಂದರೆ ಒಂದು ಜಟಿಲವಾದ ಪ್ರಶ್ನೆಯನ್ನು ಸರಿಪಡಿಸುವುದಕ್ಕೆ ಅವಕಾಶವಾಗುತ್ತದೆ. ಇದರ ಜೊತೆ ಲಂಚರುಷವತ್ತು ಹೆಚ್ಚಾಗುವುದಕ್ಕೆ ಇನ್ನೊಂದು ಕಾರಣ ಇದೆ. ಅದು ಏನೆಂದರೆ ಈಗ ಕೆಲವರಿಗೆ ಲಕ್ಷಾಂತರ ರೂಪಾಯಿ ವರಮಾನ ಬರುತ್ತದೆ. ಅದು ವರ್ಷ ವರ್ಷ ಹೆಚ್ಚುತ್ತಾ ಹೋಗುತ್ತದೆ. ಆದ್ದರಿಂದ ಈ ಹೆಚ್ಚಿನ ತೆರಿಗೆಯ ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿ ತೆರಿಗೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅನೇಕ ಸಂದರ್ಭಗಳಲ್ಲಿ ತಪ್ಪುಮಾರ್ಗಗಳನ್ನು ಅನುಸರಿಸತಕ್ಕ ಸಂದರ್ಭಗಳು ಬರುತ್ತವೆ. ಆದ್ದರಿಂದ ಸರ್ಕಾರದವರು ಹೆಚ್ಚಿನ ತೆರಿಗೆಯನ್ನು ಹಾಕದೆ ಜನಸಾಮಾನ್ಯರಿಗೆ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಶುರು ಮಾಡಿದರೆ ತೆರಿಗೆಯ ಹೊರೆ, ಮತ್ತು ಲಂಚರುಷುವತ್ತುಗಳು ಹೆಚ್ಚಾಗುವುದನ್ನು

ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಸರಿಯಾದ ನಿಯಮಾವಳಿಯನ್ನು ಮಾಡಿ ಅದರ ಪ್ರಕಾರ ಎಲ್ಲರೂ ತಮ್ಮ ಕೆಲಸಗಳನ್ನು ಶ್ರದ್ಧಾ ಭಕ್ತಿಗಳಿಂದ ಮಾಡುವುದಾದರೆ ಎಲ್ಲಾ ಸರಿ ಹೋಗುತ್ತದೆ. ಒಂದು ಸಂದರ್ಭದಲ್ಲಿ ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರು ಅವರು ಭಾಷಣ ಮಾಡುವುದಕ್ಕೆ ಸಂಬಂಧಪಟ್ಟ ಯಾವುದೋ ಒಂದು ವಿಷಯವನ್ನು ಟೈಪ್ ಮಾಡುವುದಕ್ಕೆ ಸರಿಯಾದ ಟೈಪಿಸ್ಟ್ ಸಿಕ್ಕದೆ ಇದ್ದುದರಿಂದ ಅದನ್ನು ಅವರು ನಮ್ಮ ಇನ್‌ಸ್ಟಿಟ್ಯೂಟಿಗೆ ಕಳುಹಿಸಿಕೊಟ್ಟಿದ್ದರು ಅದರಲ್ಲಿ ಒಂದು ಕಡೆ ಈ ರೀತಿ ಬರೆದಿತ್ತು. "We are lacking what is called the business morality. It is not like that in Europe. I was living in a Hotel in Switzerland. When I left and landed in Bomby, to my surprise a parcel was received. When I just opened that pocket, I was surprised to see the slippers which I had left in that Hotal". ಆ ಸಾಮಾನಿನ ಬೆಲೆ ಜಾಸ್ತಿ ಇರಬಹುದು ಅಥವಾ ಕಡಿಮೆ ಇರಬಹುದು ಅದು ಮುಖ್ಯವಲ್ಲ. ಗುಣ ಮುಖ್ಯ ಅಂಥಾ ಒಂದು ಮೊರ್‍ಯಾಲಿಟಿ ಅವರಲ್ಲಿ ಇದ್ದುದರಿಂದ ಅಲ್ಲಿರತಕ್ಕವರು ಒಳ್ಳೆಯವರು ಎಂದು ಅವರು ಅಲ್ಲಿಗೆ ಹೋದಾಗ ಅದೇ ಹೋಟೇಲಿಗೆ ಹೋಗುತ್ತಿದ್ದರು ಎಂದು ಅದರಲ್ಲಿ ಸ್ಪಷ್ಟಪಡಿಸಿದ್ದರೆ ಸರ್. ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಈಗಾಗಲೇ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೂ ನಾನು ಒಂದು ವಿಚಾರವನ್ನು ಮಾತ್ರ ಹೇಳುತ್ತೇನೆ ಅವರು ದಿವಾನರಾಗಿದ್ದಾಗ ಅವರು ಅಧಿಕಾರವನ್ನು ಬಿಟ್ಟು ಕೊಡುವುದಕ್ಕೆ ಹೋದಾಗ ಸರ್ಕಾರಿ ಕಾರಿನಲ್ಲಿ ಹೋಗಿ, ವಾಪಸ್ಸು ಬರುವಾಗ ಖಾಸಗಿ ಕಾರಿನಲ್ಲಿ ಬಂದರು ಎಂದು ಶ್ರೀಮಾನ್. ಡಿ. ವಿ. ಗುಂಡಪ್ಪನವರು ಹೇಳಿದ್ದಾರೆ ಶ್ರೀಮಾನ್ ರಾಜಗೋಪಾಲಾಚಾರಿಯವರು ಗವರ್ನರ್ ಜನರಲ್ ಆಗಿ ನೇಮಕ ಅದಾಗ ಅವರ ಹತ್ತಿರದ ಸಂಬಂಧೀಕರು ಅವರ ಹೋಗಿ ತಾವು ಅಧಿಕಾರಕ್ಕೆ ಬಂದಿದ್ದೀರಿ ನಾನು ಕಷ್ಟದಲ್ಲಿದ್ದೇನೆ. ಇಂಥಾ ಒಂದು ಕೆಲಸ ನಿಮ್ಮಿಂದ ಆಗಬೇಕು ಎಂದು ಕೇಳಿದಾಗ ಅವರು ನಾನು ಎಲ್ಲಿಯವರೆಗೆ ಅಧಿಕಾರದಲ್ಲಿರುತ್ತೇನೆ ಅಲ್ಲಿಯವರೆಗೂ ಕೂಡ ನಾನು ಯಾರಿಗೂ ನಿಯಮಾವಳಿಯನ್ನು ಬಿಟ್ಟು ಕೆಲಸಮಾಡುವುದಕ್ಕೆ ಹೋಗುವುದಿಲ್ಲ ಎಂದು ಹೇಳಿ ನೀವು ಕಷ್ಟದಲ್ಲಿದ್ದೀರಿ ಅದಕ್ಕಾಗಿ ನಿಮಗೆ ಒಂದು ಸಾವಿರ ರೂಪಾಯಿಗಳ ಚೆಕ್ ಅನ್ನು ಕಳುಹಿಸಿದ್ದೇನೆ ಎಂದು ಪತ್ರ ಬರೆದಿದ್ದನ್ನು ನಾನು ನೋಡಿದ್ದೇನೆ. ಅಂಥಾ ಒಂದು ಅವಕಾಶ ನನಗೆ ಸಿಕ್ಕಿತ್ತು. ಆದ್ದರಿಂದ ಇಂಥಾ ಮಹನೀಯರು ಆಡಳಿತ ಮಾಡುವಾಗ ಮಾರ್ಗ ದರ್ಶಕವಾಗಿತ್ತು. ಆದ್ದರಿಂದ ಆಡಳಿತ ನಡೆಸುವ ಪಕ್ಷದಲ್ಲಿ ಬಡವರಾಗಲೀ ಶ್ರೀಮಂತರಾಗಲೀ ಹಣ ಇರುವವರಾಗಲೀ, ಹಣ ಇಲ್ಲದೆ ಇರುವವರಾಗಲೀ ನ್ಯಾಯವಾದ ರೀತಿಯಲ್ಲಿ ನಿಯಮಾವಳಿಯ ಚೌಕಟ್ಟಿನಲ್ಲಿ ಕೆಲಸ ನಡೆಯತಕ್ಕ ವ್ಯವಸ್ಥೆ ಮಾಡಿದರೆ ಎಲ್ಲವೂ ಸರಿಹೋಗುತ್ತದೆ. ಯಾರಿಗೆ ದುಡ್ಡು ಇದೆ, ಯಾರಿಗೆ ಸ್ಥಾನ ಮಾನ ಇದೆ; ಯಾರಿಗೆ ಅಧಿಕಾರ ಇದೆ, ಅವರಿಗೆ ಯಾವ ಕೆಲಸ ಬೇಕಾದರೂ ಆಗುತ್ತದೆ. ಯಾವ ಸಹಾಯವೂ ಇಲ್ಲದೆ ಇರುವವರು ಕೆಲಸ ಆಗದೇ ಹೋದರೆ ಅವರು ತೊಂದರೆಗೆ ಒಳಗಾಗತಕ್ಕ ಪರಿಸ್ಥಿತಿ ಬರುತ್ತದೆ. ಯಾರು ದುಡ್ಡು ಖರ್ಚು ಮಾಡುತ್ತಾರೆ, ಯಾರು ಪ್ರಭಾವವನ್ನು ಬೀರುತ್ತಾರೆ ಅವರಿಗೆ ಕೆಲಸ ಸುಲಲಿತವಾಗಿ ಆಗುತ್ತದೆ. ಇಂಥಾ ಒಂದು ಪದ್ಧತಿಯನ್ನು ತಪ್ಪಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ನ್ಯಾಯವಾದ ರೀತಿಯಲ್ಲಿ ಆಗತಕ್ಕಂಥಾ ಕೆಲಸಗಳಲ್ಲಿ ನ್ಯಾಯ ಬಿಟ್ಟು ಹೋಗುವುದಿಲ್ಲ ಎನ್ನುವ ಒಂದು ನಿಯಮಾವಳಿಯನ್ನು ಜಾರಿಗೆ ತಂದರೆ ಭ್ರಷ್ಟಚಾರವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ ಇಲ್ಲಿಯವರೆಗೆ ಇಂಥ ವ್ಯತ್ಯಾಸಗಳು ತಾರತಮ್ಯಗಳು ಇರುತ್ತವೆ ಅಲ್ಲಿಯವರೆಗೆ ಭ್ರಷ್ಟಾಚಾರವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅನೇಕ ಸಂದರ್ಭದಲ್ಲಿ ಒಂದು ಫೈಲು ಒಂದು ಟೇಬಲ್‌ನಿಂದ ಮುಂದಕ್ಕೆ ಹೋಗಬೇಕಾದರೆ ಕಾಸು ಕೊಟ್ಟರೆ ಮಾತ್ರ ಮುಂದಕ್ಕೆ ಹೋಗುತ್ತದೆ. ಇದನ್ನು ತಪ್ಪಿಸಬೇಕಾದರೆ ಆಡಳಿತವನ್ನು ನಡೆಸತಕ್ಕ ಅಧಿಕಾರಿಗಳು ಸಾಕಷ್ಟು ಎಚ್ಚರಿಕೆಯಿಂದ ಇರಬೇಕು. ಮೈಸೂರು ರಾಜ್ಯದಲ್ಲಿ ಹಿಂದೆ ಅನೇಕ ಒಳ್ಳೆಯ ಅಧಿಕಾರಿಗಳು ಇದ್ದರು. ಈಗಲೂ ಒಳ್ಳೆಯ ಅಧಿಕಾರಿಗಳು ಇದ್ದಾರೆ ಹಿಂದೆ, ಶ್ರೀ ಮಾನ್ ಕೆ. ತಿಪ್ಪೇರುದ್ರಯ್ಯನವರು ಮತ್ತು ಶ್ರೀ ಮಾನ್ ಹೊಂಬಾಳಯ್ಯನವರು ಬಹಳ ಒಳ್ಳೆಯ ಮತ್ತು ದಕ್ಷ ಅಧಿಕಾರಿಗಳಾಗಿದ್ದರು. ಅವರು ಯಾವುದೇ ಒಂದು ಪ್ರಭಾವಕ್ಕೆ ಒಳಗಾಗುತ್ತಿರಲಿಲ್ಲ. ಆದ್ದರಿಂದ ಅಧಿಕಾರದಲ್ಲಿರತಕ್ಕವರು ಆದಷ್ಟೂ ಪ್ರಾಮಾಣಿಕರಾಗಿರಬೇಕು. ಅಧಿಕಾರಿಗಳು ಸರಿಯಾಗಿ ಇರಬೇಕಾದರೆ ಮೇಲ್ಮಟ್ಟದಲ್ಲಿರತಕ್ಕ ಮಂತ್ರಿಗಳು, ಚೇರ್ಮನ್ ಆಗಿರತಕ್ಕವರು ಎಲ್ಲಿಯವರೆಗೆ ಶುದ್ಧ ಹಸ್ತರಾಗಿರುತ್ತಾರೆ ಅಲ್ಲಿಯವರೆಗೆ ಅವರ ಕೈಕೆಳಗಿರತಕ್ಕ ಅಧಿಕಾರಿಗಳು ಸರಿಯಾಗಿರುತ್ತಾರೆ ಅವರು ತಮ್ಮ ದಾರಿ ಬಿಟ್ಟು ಹೋಗುವುದಿಲ್ಲ. ಮೇಲ್ಮಟ್ಟದಲ್ಲಿರುವವರು ೧೦ ಅಕ್ರಮಗಳನ್ನು ಮಾಡಿದರೆ ಕೆಳಮಟ್ಟದಲ್ಲಿರತಕ್ಕವರು ೧೫ ಅಕ್ರಮಗಳನ್ನು ಮಾಡುತ್ತಾರೆ. ಆದ್ದರಿಂದ ಮೇಲ್ಮಟ್ಟದಲ್ಲಿರತಕ್ಕವರು ಮಾರ್ಗದರ್ಶನ ಹಾಕಿಕೊಟ್ಟು ಕೆಲಸ ಮಾಡುವುದಾದರೆ ಅದು ರಾಜ್ಯದ ಎಲ್ಲಾ ಕಡೆಗೂ ಅನ್ಯಾಯವಾಗುತ್ತದೆ. ಆದ್ದರಿಂದ ಮಹಾತ್ಮ ಗಾಂಧೀಜಿಯವರು ಆಡಳಿತವನ್ನು ದಕ್ಷತೆಯಿಂದ ಪ್ರಾಮಾಣಿಕವಾಗಿ ನಡೆಸಿಕೊಂಡು ಹೋಗಬೇಕೆಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ನಮಗೆ ಸ್ವಾತಂತ್ರ ಬಂದಿದೆ. ಆದ್ದರಿಂದ ಕಾಂಗ್ರೆಸ್ಸನ್ನು ಡಿಸಾಲ್ವ್ ಮಾಡಬೇಕು ಸ್ಪಷ್ಟವಾಗಿ ಗಾಂಧೀಜಿಯವರು ಹೇಳಿದ್ದಾರೆ. ಇವೊತ್ತಿನ ದಿವಸ ಕಾಂಗ್ರೆಸ್ ಡಿಸಾಲ್ವ್ ಆಗಿದ್ದರೆ ಖಂಡಿತವಾಗಿಯೂ ಯಾವುದೋ ಒಂದು

ರೀತಿಯಲ್ಲಿ ರಾಜಕೀಯ ವಾತಾವರಣ ಉಂಟಾಗಿ ಒಳ್ಳೆಯದಾಗುತ್ತಿತ್ತು. ಅವರು ಕಾಂಗ್ರೆಸ್ಸಿನಲ್ಲಿ ದುಡಿದು ಸ್ವಾತಂತ್ರವನ್ನು ತಂದು ಕೊಟ್ಟು ದೇಶ ಸೇವೆಯನ್ನು ಮಾಡುವಂತೆ ತಿಳಿಸಿ ಗಾಂಧೀಜಿಯವರು ಹೊರಟು ಹೋದರು. ಸ್ವಾತಂತ್ರ ಬಂದಮೇಲೆ ಅಧಿಕಾರಕ್ಕೆ ಅನೇಕರು ಬಂದು ಸೇರಿಸಿಕೊಂಡರು. ಈಗ ಗಂಗಾನದಿ ಹುಟ್ಟುವಾಗ ಶುದ್ಧವಾದ ನೀರು ಹರಿದು ಬರುತ್ತದೆ, ಅದು ಹರಿದು ಬರುತ್ತಾ ಬರುತ್ತಾ ಅನೇಕ ಹೊಲಸುಗಳು ಸೇರಿಕೊಂಡು ಹೊಲಸಾಗುತ್ತದೆ. ಅದೇ ರೀತಿ ಪ್ರಜಾಪ್ರಭುತ್ವ ಸರ್ಕಾರದಲ್ಲಿ ಅನೇಕರು ಸೇರಿಕೊಂಡು ಅಧಿಕಾರವನ್ನು ದುರುಪಯೋಗ ಮಾಡುತ್ತಾರೆ. ಯಥಾ ರಾಜಾ ತಥಾ ಪ್ರಜಾ ಎಂದು ಅಧಿಕಾರವನ್ನು ನಡೆಸತಕ್ಕವರು ಯಾವರೀತಿ ಇರುತ್ತಾರೆಯೋ ಅದೇರೀತಿ ಪ್ರಜೆಗಳೂ ಆಗುತ್ತಾರೆ. ಆದ್ದರಿಂದ ಅಧಿಕಾರದಲ್ಲಿರತಕ್ಕವರು ನ್ಯಾಯವಾಗಿ ಪ್ರಮಾಣಿಕ್ಯವಾಗಿ ಅಧಿಕಾರವನ್ನು ನಡೆಸಬೇಕು.

ಯಾವುದೋ ಕಾರಣದಿಂದ ಚುನಾವಣೆಯಲ್ಲಿ ಓಟು ಹಾಕಿಬಿಡೋಣ ಎಂದು ಓಟು ಹಾಕುತ್ತಾರೆ. ಓಟು ಹಾಕಬೇಕು ಎಂಬ ಜವಾಬ್ದಾರಿ ಈಗ ಬಹಳ ಕಡಿಮೆಯಾಗಿದೆ ಜವಾಬ್ದಾರಿಯುತವಾಗಿ ಓಟು ಮಾಡಿದರೆ ಮಾತ್ರ ಅದಕ್ಕೆ ಬೆಲೆ ಇರುತ್ತದೆ. ಈ ಸಭೆಯು ಹೆಚ್ಚಿನ ಕಾಲವನ್ನು ತೆಗೆದುಕೊಳ್ಳದೆ ನಾನು ಒಂದು ಮಾತನ್ನು ಹೇಳುತ್ತೇನೆ. ಈಗ ಕಾಲ ಬದಲಾವಣೆ ಆಗಿದೆ. ನಾನು ಮೊನೆ ಹೇಳಿದಹಾಗೆ ಹಿಂದಿನ ಕಾಲದಲ್ಲಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಮತ್ತು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಮತ್ತು ಪೋಲೀಸಿನವರು ನಾಲ್ಕಾಣೆ, ಎಂಟಾಣೆ ತೆಗೆದುಕೊಳ್ಳುತ್ತಿದ್ದರು. ಈ ರೀತಿ ಲಂಚ ತೆಗೆದುಕೊಳ್ಳುವಂಥ ಹವ್ಯಾಸ ಬಹಳ ಡಿಪಾರ್ಟ್‌ಮೆಂಟ್‌ಗಳಲ್ಲಿದೆ. ಈಗ ಏನಾಗಿದೆಯೆಂದರೆ ಸೇಲ್ಸ್ ಡಿಪಾರ್ಟ್‌ಮೆಂಟಿನಲ್ಲಿ ನೂರುಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತಿದೆ. ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನ ಪ್ರೋಸೆಸ್ ಸರ್ವರ್ ಅವರಿಂದ ಹಿಡಿದು ಕೊನೆಗೆ ಟಾಪ್ ಆಫೀಸರ್ಸ್‌ವರೆಗೆ ಹಣವನ್ನು ಲೂಟಿ ಮಾಡುತ್ತಾ ಇದ್ದಾರೆ. ಇವತ್ತಿನ ದಿವಸ ಸರಿಯಾದ ರೀತಿ ವಸೂಲುಮಾಡಿದರೆ ಖಂಡಿತವಾಗಿ ಯಾವ ಹೊಸ ತೆರಿಗೆಯನ್ನೂ ಹಾಕದೆ ಈ ಸೇಲ್ಸ್ ಟ್ಯಾಕ್ಸ್ ಬಾಬಿನಿಂದಲೇ ೧೫೦ ಕೋಟಿ ರೂಪಾಯಿಗಳ ವರಮಾನ ಪಡೆಯಬಹುದು. ಅದಕ್ಕೆ ನಿಷ್ಠಾವಂತ ಅಧಿಕಾರಿಗಳು ಇರಬೇಕು ಸರಿಯಾದಂಥ ರೀತಿಯಲ್ಲಿ ಸೇಲ್ಸ್ ಟ್ಯಾಕ್ಸ್ ಆಫೀಸರ್ಸ್ ಕೆಲಸ ಮಾಡಿದರೆ ಎಷ್ಟೋ ಲಕ್ಷ ರೂಪಾಯಿಗಳನ್ನು ಉಳಿಸುವುದು ಅನುಕೂಲವಾಗುತ್ತದೆ. ಅದಕ್ಕಾಗಿ ೪೦-೫೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. ಬೆಂಗಳೂರು ಸರ್ಕಲ್‌ನಲ್ಲಿ ಎಷ್ಟೋ ಲಕ್ಷ ರೂಪಾಯಿಗಳ ಬಾಕಿಯನ್ನು ವಸೂಲು ಮಾಡಬೇಕಾಗಿದೆ.

3-30 P. M.

SRI D. B. KALMANKAR.—If you yield, I would like to say same thing you say that in the Police Department they are taking 8 annas or one rupee. I think you are not well informed. Even in our State when theres was the Nizam's Government. corruption was there. Don't say it has come only now, and it was not there. It was not there on a very larg scale.

ಶ್ರೀ ಟಿ. ಆರ್. ಶಾಮಣ್ಣ.—ಅದರ ಬಗ್ಗೆ ನಿಜಾಂಶವನ್ನು ಹೇಳಬೇಕು. ನಾನು ಇದನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ಬಸ್ ಬಂದಾಗ ಪೋಲೀಸಿನವರು ಬಂದರೆ, ಡ್ರೈವರ್ ಅವರಿಗೆ ನಾಲ್ಕಾಣೇ ಎಂಟಾಣೆ ಇಡುತ್ತಾರೆ ಅಂತಹ ಸಣ್ಣ ವಿಚಾರಗಳನ್ನು ಬಿಡಿ. ಸರಿಯಾದಂಥ ರೀತಿಯಲ್ಲಿ ಲೆಕ್ಕ ಇಟ್ಟರೆ, ಸೇಲ್ಸ್‌ಟ್ಯಾಕ್ಸ್ ಬಾಬಿನಲ್ಲಿ ೧೫೦ ಕೋಟಿ ರೂಪಾಯಿಗಳನ್ನು ಬಹಳ ಸುಲಭವಾಗಿ ವಸೂಲು ಮಾಡಬಹುದು, ಆದ್ದರಿಂದ ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಿಂದ ಹೆಚ್ಚಿನ ವರಮಾನ ಸರ್ಕಾರಕ್ಕೆ ಬರುವಂತೆ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಲಂಚ ತೆಗೆದುಕೊಳ್ಳುತ್ತಿದ್ದಾರೆಂದು ಕೆಲವರು ಹೇಳಿದರು. ಆ ರೀತಿಯಾಗಿ ಹಿಂದೆಯೂ ತೆಗೆದುಕೊಳ್ಳುತ್ತಿದ್ದರು, ಈಗಲೂ ತೆಗೆದುಕೊಳ್ಳುತ್ತಾ ಇದ್ದಾರೆ. ಹಿಂದೆ ಲಾರಿಯವರು ಮಾಮೂಲು ಇಷ್ಟು ಎಂದು ವಸೂಲುಮಾಡುತ್ತಿದ್ದರು ಈಗ ಸ್ಕೇಲ್ ಪ್ರಕಾರ ನಡೆದು ಕೊಂಡು ಹೋಗುತ್ತಿದೆ. ಎಂದು ಹೇಳುತ್ತಾರೆ. ಹಿಂದಿನ ಕಾಲದಲ್ಲಿ ಅಂತಹ ಸ್ಕೇಲ್ ಇರಲಿಲ್ಲ. ಈಗ ಅವರಿಗೆ ಆ ರೀತಿ ವಸೂಲು ಮಾಡಿಕೊಳ್ಳುವ ಶಕ್ತಿ ಇದೆ ಇನ್ನು ಆರ್.ಟಿ.ಓ. ಆಫೀಸಿನಲ್ಲಿ ನೋಡಿ ರೆ ಎಷ್ಟೋ ಜನ ದಲ್ಲಾಳಿಗಳು ಇದ್ದಾರೆ ಅಲ್ಲಿ ಒಂದು ಸಣ್ಣ ಸಂದಿ ಇದೆ ಅಲ್ಲಿ ವ್ಯಾಪಾರ ಎಷ್ಟರಮಟ್ಟಿಗೆ ಇರುತ್ತದೆಂಬುದನ್ನು ತಾವು ನೋಡಬೇಕು. ಆರ್.ಟಿ.ಓ. ಆಫೀಸಿನಲ್ಲಿ ಡ್ರೈವಿಂಗ್ ಲೈಸೆನ್ಸ್ ತೆಗೆದು ಕೊಳ್ಳುವಾಗ ಲಂಚ ಕೊಡಬೇಕು. ನಮಗೆ ೧೦-೧೫ ದಿನಗಳ ಅಲೆದಾಡುವ ಹಾಗೆ ಆಯಿತು. ನನ್ನಂಥ ಎಂ.ಎಲ್.ಎ. ಕಥೆ ಈ ರೀತಿ ಆದರೆ ಬೇರೆಯವರ ಗತಿಯೇನು? ಅನೇಕ ಏಜೆಂಟರ ಮೂಲಕ ಇಂತಹ ವ್ಯವಹಾರಗಳು ಆಗುತ್ತವೆ. ಲಾರಿಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಕೊಡುವಾಗ ಈ ರೀತಿ ನಡೆಯುತ್ತದೆ

ಕಾಂಟ್ರಾಕ್ಟ್ ಕ್ಯಾರೇಜಸ್ ಏನಿವೆಯೋ ಅವು ಸುಲಲಿತವಾಗಿ ಹಗಲಿನಲ್ಲಿಯೇ ಕಾಯಿದೆಯನ್ನು ಮೀರಿದು ಹೆಚ್ಚಿನ ರೀತಿಯಲ್ಲಿ ಓಡಾಡುತ್ತಿವೆ. ಸರ್ಕಾರದ ಬಸ್ಸುಗಳು ಮಾತ್ರ ಖಾಲಿ ಹೋಗುತ್ತವೆ. ಆದ್ದರಿಂದ ಎಷ್ಟು ಪರ್ಮಿಟ್‌ಗಳನ್ನು ತೆಗೆದುಕೊಳ್ಳಬೇಕು, ಹೇಗೆ ಮಾಡಬೇಕೆಂಬ ಬಗ್ಗೆ ಯೋಜನೆಮಾಡಬೇಕು ಫುಡ್ ಅಂಡ ಸಿವಿಲ್ ಸಪ್ಲೈಸ್‌ನಲ್ಲಿ ಅಕ್ಕಿಮೂಟೆ ಲಾರಿ ಕೇರಳದಿಂದ ತಮಿಳುನಾಡಿಗೆ ಬರಬೇಕಾದರೆ ಒಂದು ಸಾವಿರ ರೂಪಾಯಿಗಳನ್ನು ಕೊಡಬೇಕು. ರೇಷನಿಂಗ್ ಡಿಪೋಗಳಲ್ಲಿ ಬರತಕ್ಕ ಸಕ್ಕರೆಯನ್ನು ಸ್ಲಮ್ಸ್ ಇರುವ ಕಡೆ ಮೂಟೆಗಟ್ಟಲೆ ಮಾಮೂಲು ಕೊಡುತ್ತೇವೆಂದು ಇಳಿಸುತ್ತಿದ್ದರು. ಇಲ್ಲದೇ ಹೋದರೆ ಮೋರುಬುಟ್ಟಿಯಲ್ಲಿ ಕೂಡಿಟ್ಟುಕೊಂಡು ಸಾಗಿಸುತ್ತಿದ್ದಾರೆ ಇಂಥಾದ್ದು ರೇಷನ್ ಡಿಪೋಗಳಲ್ಲಿ ಆಗಿದೆ. ಇಂತಹ ಅಕ್ರಮಗಳಲ್ಲಿ ಅನೇಕರು ಭಾಗವಹಿಸುತ್ತಿದ್ದಾರೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಲ್ಲಿ ಪೇಪರ್ ಯಾರಿಗೆ ಬೇಕೋ ಅವರಿಗೆ ಬಜಾರಿನಲ್ಲಿರುವುದಕ್ಕಿಂತಲೂ ಕಡಿಮೆಯಾಗಿ ಕೊಡುತ್ತಿದ್ದಾರೆ ೨೫೦೦ ರೂಪಾಯಿಗಳು ಇವರ ರೇಟ್ ಆದರೆ ಬಜಾರಿನಲ್ಲಿ ೫೦೦೦ ರೂಪಾಯಿಗಳಿರುತ್ತವೆ. ಹೀಗೆ ಇವತ್ತು ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದಾರೆ ಸ್ಟೇನ್‌ಲೆಸ್ಸ್ಟೀಲ್, ಐರನ್ ಅಂಡ್ ಸ್ಟೀಲ್ ಡೀಲರ್‌ಷಿಪ್‌ಗಳನ್ನು ಪಡೆದು ಅದರಲ್ಲಿ ಎಷ್ಟೋ ಹಣ ಅವ್ಯವಹಾರವಾಗಿದೆ. ಅದನ್ನು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಲ್ಲಿ ನೋಡಬಹುದು.

ಇನ್ನು ಆಸ್ಪತ್ರೆಗಳಲ್ಲಿ ಬಡವರಿಗೆ ಅನುಕೂಲವಾಗದೆ ಕೇವಲ ಶ್ರೀಮಂತರಿಗೆ, ದುಡ್ಡು ಇರತಕ್ಕವರಿಗೆ ಇನ್‌ಫ್ಲುಯೆನ್ಸ್ ಇರುವವರಿಗೆ ಮಾತ್ರ ಅನುಕೂಲವಾಗುತ್ತಿದೆ. ಇದರ ಬಗ್ಗೆ ಇನ್ನು ಹೆಚ್ಚಿಗೆ ಹೇಳಬೇಕಾಗಿಲ್ಲ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್, ಹೌಸಿಂಗ್ ಬೋರ್ಡ್ ಕಾರ್ಪೊರೇಷನ್, ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್, ಎಲೆಕ್ಟ್ರಿಸಿಟಿ ಬೋರ್ಡ್ ಇವುಗಳಲ್ಲಿ ಒಂದೊಂದು ಸ್ಟೇಜಿನಲ್ಲೂ ಅನ್ಯಾಯಗಳು ಆಗುತ್ತಿವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಮೊದಲು ಲಂಚ ಬಹಳ ಕಡಿಮೆ ಇತ್ತು. ಈಗ ಪ್ರೈವೇಟ್ ಸ್ಕೂಲುಗಳಲ್ಲಿ ಆಗುತ್ತಿರುವ ಅವ್ಯವಹಾರದಿಂದ ಅವರಿಗೆ ಬಂದಿರತಕ್ಕಷ್ಟು ಕೆಟ್ಟ ಹೆಸರು ಇನ್ನು ಯಾರಿಗೂ ಬಂದಿಲ್ಲ. ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಇಂಗ್ಲಿಷ್ ಮೀಡಿಯಂಗೋಸ್ಕರ ಗ್ರಾಂಟ್ ಇನ್ ಏಡ್ ರೆಕಗ್ನಿಷನ್ ಕೊಡುವಾಗ ಕರಪ್ಷನ್ ಬಹಳ ಜಾಸ್ತಿ ಇದೆ. ಅನೇಕ ವಿಧವಾದ ಅಕ್ರಮಗಳು ಈಗ ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿವೆ. ಹಿಂದೆ ಎಜುಕೇಷನ್ ಡಿಪಾರ್ಟ್‌ಮೆಂಟ್ ಬಹಳ ಶುದ್ಧವಾಗಿತ್ತು ಈ ಡಿಪಾರ್ಟ್‌ಮೆಂಟಿನಲ್ಲಿ ಇತ್ತೀಚಿನದಿವಸ ನಡೆಯುತಕ್ಕ ಅಕ್ರಮಗಳು ಇನ್ನು ಎಲ್ಲಿಯೂ ಇಲ್ಲ. ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಯಾವಾಗಲೂ ಒಂದು ಶಾಲೆಯಲ್ಲಿ ೩೦ ಹುಡುಗರು ಮಿನಿಮಂ ಇರಬೇಕು. ಒಂದು ಶಾಲೆಯಲ್ಲಿ ಇರತಕ್ಕವರು ಕೇವಲ ೧೫ ಜನರು. ಆ ೧೫ ಜನ ಹೆಸರು ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿ ಬರಯುದೇ ಇದ್ದರೂ ಗ್ರಾಂಟ್ ಕೊಡುತ್ತಿದ್ದಾರೆ. ಒಂದು ಇಂಗ್ಲಿಷ್‌ಸ್ಕೂಲ್ ಅವರು ೬ ವರ್ಷ ಗ್ರಾಂಟ್ ತೆಗೆದುಕೊಂಡಿದ್ದಾರೆ. ಅಲ್ಲಿ ಕನ್ನಡ ಮೀಡಿಯಂ ಮಾಡುತ್ತಿದರೂ ಗ್ರಾಂಟ್ ಕೊಟ್ಟಿದ್ದಾರೆ. ಹೀಗೆ ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಕರಪ್ಷನ್ ಇರುವುದು ಬಹಳ ಶೋಚನೀಯ.

ಇನ್ನು ಕೋ ಆಪರೇಷನ್ ಡಿಪಾರ್ಟ್‌ಮೆಂಟ್ ಸಹ ಕರಪ್ಷನ್ ಡಿಪಾರ್ಟ್‌ಮೆಂಟ್. ಜುಡಿಷಿಯಲ್ ಡಿಪಾರ್ಟ್‌ಮೆಂಟಿನಲ್ಲಿ ಹಿಂದೆ ಸಾಧಾರಣವಾಗಿ ಜಡ್ಜ್‌ಗಳ ಮನೆಯ ಹತ್ತಿರ ಹೋಗುವುದಕ್ಕೆ ಜನರು ಭಯ ಪಡುತ್ತಿದ್ದರು. ಈಗ ತೀರ್ಪು ಕೊಡುವಾಗ ಹಣ ಅಥವಾ ಪ್ರಭಾವಕ್ಕೊಳಗಾಗಿ ತೀರ್ಪುಗಳನ್ನು ಕೊಡುತ್ತಿದ್ದಾರೆಂಬ ಬಗ್ಗೆ ಅನೇಕ ನಿದರ್ಶಗಳು ನನಗೆ ಗೊತ್ತಿದೆ. ಒಂದು ಆಡಳಿತ ಸರಿಹೋಗಬೇಕಾದರೆ, ಲಂಚರುಷುವತ್ತು ಹೋಗಬೇಕಾದರೆ ಯಾವ ಪ್ರಭಾವಕ್ಕೂ ಒಳಗಾಗದೇ ಇರುವುದು ಮುಖ್ಯವಾದುದು. ಕೊನೆಯದಾಗಿ ಹೇಳುವುದಾದರೆ ಈಗಿರತಕ್ಕ...

Mr. Deputy Speaker in the chair

SRI D. B. KALMANKAR.—When the Judges are also committed by corruption they are the people who have got standard of thinking and they are the cream of the society when they also are subject to corruption, how can it be removed ? Pleasse suggest as to how it can be eradicated.

ಶ್ರೀ ಟಿ ಆರ್. ಶಾಮಣ್ಣ.—ಎಲ್ಲಿ ನ್ಯಾಯ ದೊರಕಬೇಕೋ ಅಲ್ಲಿ ನ್ಯಾಯ ದೊರಕಿಲ್ಲ. ನನಗೆ ಆಗಿರತಕ್ಕ ಅನ್ಯಾಯಗಳನ್ನೆಲ್ಲಾ ನಾನು ತಮ್ಮ ಗಮನಕ್ಕೆ ತಂದುಕೊಡುತ್ತೇನೆ. ಅದನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ನಾನು ಅದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. ಉದಾಹರಣೆಗಳನ್ನು ಮಾತ್ರ ಹೇಳುತ್ತಿದ್ದೇನೆ.

ಇವತ್ತಿನವರೆಗೆ ಎಷ್ಟು ಕೇಸುಗಳನ್ನು ವಿಜಿಲೆನ್ಸ್ ಕಮಿಷನ್‌ನವರು ಕಂಡುಹಿಡಿದಿದ್ದಾರೆ ಮತ್ತು ಎಷ್ಟು ಜನರಿಗೆ ಶಿಕ್ಷೆಯಾಗಿದೆ ಎಂಬುದನ್ನು ನೋಡಿದರೆ ಎಲ್ಲಾ ಗೊತ್ತಾಗುತ್ತದೆ. ಆದುದರಿಂದ ಯಾರು ಆಡಳಿತವನ್ನು ನಡೆಸುತ್ತಾರೆ ಅವರು ಕರಪ್ಷನ್ ತೆಗೆಯಬೇಕೆಂದು ಮನಸ್ಸು ಮಾಡಿದರೆ, ಎಲ್ಲಿ ಲೋಪದೋಷಗಳು ಇವೆಯೆಂದು ಕಂಡುಹಿಡಿಯುವುದಕ್ಕೆ ಸಾಧ್ಯವಿದೆ. ಇದರ ಬಗ್ಗೆ ದಕ್ಷತೆ ಯಿಂದ ಕೆಲಸ ಮಾಡಬೇಕು ಇದರ ಬಗ್ಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳ ಬೇಕೆಂದರೆ ನಿಷ್ಟೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳು ಇರಬೇಕು ಜೊತೆಗೆ ಯಾರ ಪ್ರಭಾವಕ್ಕೂ ಬೀಳದೆ ನಿರ್ದಾಕ್ಷಿಣ್ಯವಾಗಿ ಕೆಲಸಮಾಡುವ ಅಧಿಕಾರಿಗಳು ಇದ್ದರೆ ಕರಪ್ಷನ್ ತಡೆಯಲು ಸಾಧ್ಯ. ಆದ್ದರಿಂದ ದಯಮಾಡಿ ಸರ್ಕಾರದವರು ಯಾರ ಪ್ರಭಾವಕ್ಕೂ ಸಿಕ್ಕದೆ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡತಕ್ಕ ಮೂವರು ನ್ಯಾಯಾಧೀಶರನ್ನು ನೇಮಿಸಿ ಒಂದು ಆಯೋಗವನ್ನು ಮಾಡಿ ತೀರ್ಮಾನ ತೆಗೆದು ಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್, (ಹೊಸನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಮಣ್ಣನವರು ತಂದಿರುವ ನಿರ್ಣಯ ಎರಡು ಭಾಗ ಇದೆ. ಒಂದು ಭಾಗ ಲಂಚಾವತಾರದ ಬಗ್ಗೆ ಇನ್ನೊಂದು ಕೆಲಸಕಾರ್ಯಗಳಲ್ಲಿ ನಿಯಂತ್ರಣ ಮಾಡುವ ಬಗ್ಗೆ. ಮಾನ್ಯ ಶಾಮಣ್ಣನವರು ಮಾಡಿದ ಭಾಷಣವನ್ನು ಕೇಳುತ್ತಿದ್ದರೆ ಒಂದು ಜ್ಞಾಪಕಕ್ಕೆ ಬರುತ ದೆ. ಮಹಾಭಾರತದ ಕಾಲದಲ್ಲಿ ವಿರಾಟೇಶ್ವರನ ವಿಹಂಗಮ ನೋಟವನ್ನು ತೋರಿಸದಂತೆ ಕಾಣುತ್ತದೆ. ಈಗ ದೇಶದಲ್ಲಿ ಏನು ಲಂಚಾವತಾರ ಇದೆ ಅದು ಪರಂಪರೆಯಾಗಿ ಬಂದಿದೆಯೋ ಏನೋ ಗೊತ್ತಾಗುವುದಿಲ್ಲ. ಈ ಮನೆಯ ಕಮಲಮ್ಮನವರು ಆ ಮನೆಯ ಪಾರ್ವತಮ್ಮನವರು ನಾಶವಾಗಲಿ ಎಂದು ಶ್ರಾವಣ ಶುಕ್ರವಾರದಲ್ಲಿ ದುರ್ಗಮ್ಮನಿಗೆ ಪೂಜಾರ್ಚನೆ ಅರ್ಪಿ ಸಿದಂತೆ, ಇದು ಒಂದು ಲಂಚಅಲ್ಲವೇ ಸ್ವಾಮಿಎಂದು ಕೇಳುತೇನೆ. ಸ್ಕೂಲಿಗೆ ಹೋಗುವಹುಡುಗರು ನನ್ನನ್ನು ಪಾಸ್‌ಮಾಡಿದರೆ ನಿನಗೆ ಜೋಡಿ ತೆಂಗಿನಕಾಯನ್ನು ಒಡೆಯುತ್ತೇನೆಂದು ಹೇಳುತ್ತಾರೆ ಗಣಪನಿಗೆ. ಯಾರಿಗಾದರೂ ಒಂದು ಕೆಲಸವಾಗಬೇಕೀದರೆ ಪರಮಾತ್ಮನಿಗೆ ಹರಸಿಕೊಳ್ಳುತ್ತಾರೆ. ಇಂಥ ಕೆಲಸ ಆದರೆ ಪರಮಾತ್ಮ ನಿನ್ನ ಸೇವೆ ಮಾಡುತ್ತೇನೆಂದು. ಈ ರೀತಿ ವೆಂಕಟರಮಣನಿಗೂ ಲಂಚ ಕೊಟ್ಟು ಕೆಲಸಮಾಡಿ ಕೊಳ್ಳುತ್ತಾರೆಂದರೆ ಇದಕ್ಕೆ ಏನು ಹೇಳಬೇಕು ? ಈ ಕರೆಕ್ಷನ್ ಏನು ಇದೆ ಇದು ಬಹುಶಃ ಇದಕ್ಕೆ ಒಂದು ಪರಂಪರೆ ಇರಬಹುದು ಎಂದು ತಿಳಿಯುತ್ತೇನೆ.......

SRI V. N. PATIL.—Service and conduct rules have not yet been framed.

SRI D. B KALMNNKAR.—Probably the Hon. Member knows that most of these Marwaries and Gujarathi businessmen and all the big capitalists go to Tirupathi.

SRI V. N. PATIL —The next day they get huge profit.

ಶ್ರೀ ಎಸ್ ಎಂ. ಶೀರನಾಳಿ ಚಂದ್ರಶೇಖರ್:—ಇವೊತ್ತು ಏನಾಗಿದೆ ಎಂದರೆ ಅನ್ಯಾಯವಾಗಿ ಸಂಪಾದಿಸಿರುವ ಸ್ವತ್ತನ್ನು, ಯಾರ್ಯಾರದೋ ತಲೆಹೊಡೆದು ಸಂಪಾದಿಸಿದಂತಹ ದುಡ್ಡಿನಿಂದ ದೇವಸ್ಥಾನ ವನ್ನು ಕಟ್ಟಿಸಿ ಅದರ ಮುಖಾಂತರ ಅವರು ಮಾಡಿರುವ ಅನ್ಯಾಯ ವನ್ನು ಮತ್ತು ಪಾಪವನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಆದ್ದರಿಂದ ಆ ಭಗವಂತನನ್ನು ಕೇಳುತ್ತೇನೆ ನೀನೂ ಲಂಚ ತೆಗೆದುಕೊಳ್ಳುತ್ತೀಯಾ?

ಶ್ರೀ ಬಿ. ಪುಟ್ಟಸ್ವಾಮಯ್ಯ: —ಸ್ವಾಮಿ ಸನ್ನಿಧಿಗೆ ಹೋಗಿ ಬಿಟ್ಟಿದ್ದೀರಿ? ಸ್ವಾಮಿ ಸನ್ನಿಧಿಗೆ ಹೋದ ಮೇಲೆ ತಾವು ಮಾತನಾಡುವ ಹಾಗಿಲ್ಲ ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ:—ಇವೊತ್ತು, ಪಾಶ್ಚಿಮಾತ್ಯ ದೇಶಗಳಲ್ಲಿ ಏನಾಗಿದೆ ಎಂದರೆ ಇಷ್ಟು ಕೆಲಸಮಾಡಿ ಕೊಟ್ಟರೆ ಇಂತಿಷ್ಟು ಟಿಪ್ಸ್ ಎಂದು ತೆಗೆದುಕೊಳ್ಳುತ್ತಾರೆ. ಅನಂತರ ಯಾವುದೇ ಸಮಾಜಿಕ ಸೇವೆ ಅಲ್ಲಿ ಇಲ್ಲ. ಅಲ್ಲೂ ಕೂಡ ಇಂತಿಷ್ಟು ಟಿಪ್ಸ್ ಕೊಡಬೇಕೆಂದು ಇದೆ. ಹಾಗಾದರೆ ಎಲ್ಲಿ ಈ ಲಂಚ ಇಲ್ಲ ಎಂದು ಈ ಸದನದ ಮುಂದೆ ಕೇಳಬಯಸುತ್ತೇನೆ. ಇನ್ನು ಮಾನ್ಯ ಶಾಮಣ್ಣನವರು ಮಾತನಾಡುತ್ತಾ ಹೇಳಿದರು, ನನ್ನ ಚುನಾವಣೆಯಲ್ಲಿ ಕೆಲವು ನನ್ನ ಸ್ನೇಹಿತರು ದುಡ್ಡನ್ನು ಖರ್ಚುಮಾಡಿದ್ದಾರೆ ಎಂದು, ಇದು ಲಂಚ ಅಲ್ಲವೇ ಸ್ವಾಮಿ? ಇವರ ಸ್ನೇಹಿತರು ಇವರನ್ನು ಯಾವಾಗ ಲಾದರೂ ಬಳಸಿಕೊಳ್ಳುತ್ತಾರೆ. ಇವರು ಚುನಾವಣೆಯಲ್ಲಿ ಆರಿಸಿಬರುತ್ತಾರೆ, ಬಂದಮೇಲೆ ಇವರು ಇವರ ಸ್ನೇಹಿತರ ಋಣವನ್ನು ತೀರಿಸಿ ಮುಕ್ತರಾಗಲೇಬೇಕಾಗುತ್ತದೆ. ಅದು ಎಲ್ಲರ ಕರ್ತವ್ಯ.

ಶ್ರೀ ಬಿ. ಪುಟ್ಟಸ್ವಾಮಯ್ಯ:—ಸ್ವಂತ ಹೆಂಡತಿಯನ್ನು ಮೆಂಹನತ್ ಮಾಡುವುದು ಒಂದು ಲಂಚ ಎಂದು ತಮ್ಮ ಅಭಿಪ್ರಾಯವೇ ಸ್ವಾಮಿ?

ಶ್ರೀ ಟಿ. ಆರ್. ಶಾಮಣ್ಣ.—ನನ್ನ ಕಾನ್ಸಿಟ್ಯೂಯೆನ್ಸಿ ಬಹಳ ದೂರವಿಲ್ಲ. ಇದೇ ಬೆಂಗಳೂರು ನಗರದಲ್ಲಿ ಇದೆ. ಮಾನ್ಯ ಚಂದ್ರಶೇಖರ್‌ರವರು ಹೋಗಿ ಯಾರನ್ನಾದರೂ ಕೇಳಲಿ? ಅಲ್ಲಿ ನನ್ನ ಬಗ್ಗೆ ಏನಾದರೂ ಹೇಳಿದರೆ ಆಮೇಲೆ ತಾವು ಹೇಳಿ ನಾನು ಒಪ್ಪುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಇದು ಸರ್ವೆಸಾಧಾರಣ ಆಗಿ ಹೋಗಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಇರುವುದೇ ಒಂದು ಅಪರಾಧ "ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು" ಎಂಬಂತೆ "ಈಸಿಕೊಂಡವನು ವೀರಭದ್ರ ಕೊಟ್ಟವನ್ನು ಕೋಡಂಗಿ" ಎಂಬಂತೆ ಆಗಿದೆ ಈ ಲಂಚಾವತಾರ. ಈಗ ಇದಕ್ಕೆ ಒಂದು ಉಪಾಯವನ್ನು ಮಾಡಬೇಕು. ಇದನ್ನು ಕಂಡುಹಿಡಿಯಬೇಕಾದರೆ ಈ ಸ್ಮಗಲ್‌ರ್ಸ್ ಹೊರದೇಶಗಳಿಂದ ಬರುವಾಗ ಏನಾದರೂ ಸ್ಮಗಲಿಂಗ್ ತಂದಿದ್ದಾರೆಂದು ಕಂಡುಹಿಡಿಯಲು ಬಾರಾಮೀಟರ್ ಇಟ್ಟಿರುತ್ತಾರೆಂದು ಕೇಳಿದ್ದೇನೆ. ಆ ರೀತಿ ಏನಾದರೂ ಅಂತಹ ಒಂದು ಯಂತ್ರವನ್ನು ಬಳಸಿದರೆ ಒಳ್ಳೆಯದು ಎಂದು ಕಾಣುತ್ತದೆ. ಸಾಮಾನ್ಯವಾಗಿ ಅಂಟಿಕರೆಪ್ಷನ್ ಇಲಾಖೆಗೆ ದೂರು ಕೊಡುತ್ತೀವಿ, ಅವರು ಬಂದಾಗ ಅವರಿಗೆ ಹಣವನ್ನು ಕೊಟ್ಟರೆ ಮತ್ತು ಅವರು ಅದನ್ನು ಜೋಬಿಗೆ ಹಾಕಿಕೊಂಡು ಬಿಟ್ಟರೆ ಲಂಚವನ್ನು ತಡೆಗಟ್ಟುವುದು ಹೇಗೆ? ನಾನು ವಕೀಲ್ ವೃತ್ತಿಯನ್ನು ಪ್ರಾರಂಭಿಸಿದಾಗ, ಸೀನಿಯರ್ ಜೊತೆಗೆ ಇದ್ದೆ. ಅಮಲಜಾರಿ ಏನು ಇದೆ ಅದನ್ನು ನೋಡಿಕೊಂಡುಬರಲು ಕಳುಹಿಸಿದರು. ನನ್ನಕೈಗೆ ಅವರು ಹತ್ತು ರೂಪಾಯಿಗಳನ್ನು ಕೊಟ್ಟು ಯಾವಯಾವ ಟೇಬಲ್‌ಗೆ ಎಷ್ಟೆಷ್ಟು ಹಾಕಬೇಕು ಎಂದು ನೋಡಿ ಕೆಲಸ ಮಾಡಿಕೊಂಡು ಬರಲು ತಿಳಿಸಿದರು ನನಗೆ ಆಗ, ಹೇಗೆ ಇದು, ಸರ್ಕಾರದವರು ಇವರಿಗೆ ಸಂಬಳ ಸಾರಿಗೆಗಳನ್ನು ಕೊಡುವುದಿಲ್ಲವೇ? ತಿಂಗಳ ಮೊದಲನೆಯ ತಾರೀಖು ಇವರಿಗೆ ಸಂಬಳ ಸಿಕ್ಕುವುದಿಲ್ಲವೇ? ಏಕೆ ನಾವು ಇವರಿಗೆ ಒಂದೆರಡು ರೂಪಾಯಿಗಳನ್ನು ಕೊಡಬೇಕು ಎನ್ನಿಸಿತು. ಆಗ ನಾನು ಅಲ್ಲಿರತಕ್ಕ ಜಡ್ಜ್ ಅವರನ್ನು ಕೇಳಿದೆ, ಸ್ವಾಮಿ ತಮ್ಮ ಆಫೀಸಿನಲ್ಲಿರತಕ್ಕ ಕಾರಖೂನರಿಗೆ ಯಾವಯಾವ ಕೆಲಸಗಳಿಗೆ ಎಷ್ಟೆಷ್ಟು ಹಣವನ್ನು ಕೊಡಬೇಕು ಎಂದು ನಿರ್ಣಯ ಮಾಡಿದ್ದೀರಿ, ಅದನ್ನುನೋಟೀಸ್ ಬೋರ್ಡಿಗೆ ಹಾಕಿಸುತ್ತೀರಾ ಎಂದು ಕೇಳಿದೆ. ನಾನು ಈ ರೀತಿ ಕೇಳಿದ್ದನ್ನು ಗಮನಿಸಿದ ನಮ್ಮ ಸೀನಿಯರ್ ನನ್ನನ್ನು ಇಂಥ ಕೆಲಸಗಳಿಗೆ ಕಳುಹಿಸುವುದನ್ನು ಕೈಬಿಟ್ಟರು. ಆದ್ದರಿಂದ ನಾವುಪ್ರಪಂಚದಲ್ಲಿ ಹೊಂದಾಣಿಕೆ ಮಾಡಿನಿಗೆ ಕೊಂಡು ಹೋಗುವುದನ್ನು ಕಲಿಯಬೇಕಾಗುತ್ತದೆ ಹರಿಯುವ ನೀರಿನ ವಿರುದ್ಧವಾಗಿ ಈಜಿ ಕೊಂಡು ಹೋಗುವುದು ಕಷ್ಟವಾಗುತ್ತದೆ. ಲಂಚ ನಿರ್ಮೂಲ ಮಾಡಬೇಕಾದರೆ ಹೇಗೆ ಮಾಡಬೇಕು? ಮನುಷ್ಯ ಆಸೆ, ಆಕಾಂಕ್ಷೆ, ಅಮಿಷಗಳು ಯಾವಾಗಲೂ ಇರುತ್ತವೆ. ನಾನು ಕೇಳುತ್ತೇನೆ, ತಾವು ಯಾವುದಕ್ಕೆ ಲಂಚ ಎಂದು ಕರೆಯುತ್ತೀರಿ? ಯಾವುದೇ ಒಂದು ಸಂಸ್ಥೆಯಾಗಲೀ, ಯಾವುದೇ ಒಂದು ರಾಜಕೀಯ ಪಕ್ಷವಾಗಲೀ ಸಾರ್ವತ್ರಿಕವಾಗಿ ಹಣವನ್ನು ಸಂಗ್ರಹಣೆ ಮಾಡಿ ಪಕ್ಷದ ಮುಖೇನ ಚುನಾವಣೆಗೆ ಅಭ್ಯರ್ಥಿಗಳನ್ನು ನಿಲ್ಲಿಸುತ್ತಾರೆ. ಅಭ್ಯರ್ಥಿಗಳನ್ನು ನಿಲ್ಲಿಸಿದಾಗ ಕೆಲವರು ೩೦–೪೦ ಸಾವಿರ ರೂಪಾಯಿಗಳ ಡೊನೇಷನ್ ಅನ್ನು ಕೊಡಬಹುದು. ಇಷ್ಟು ಹಣವನ್ನು ಅವರು ಕೊಟ್ಟಮೇಲೆ ಅವರು ಚುನಾಯಿತ ಪ್ರತಿನಿಧಿಗಳಿಂದ ಏನನ್ನಾದರೂ ನಿರೀಕ್ಷಣೆ ಮಾಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನೀವು ಎಷ್ಟು ಹಣ ಸಂಗ್ರಹಣೆ ಮಾಡಿದ್ದೀರಿ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಗೇಣಿದಾರರ ರಕ್ಷಣೆಗೆ ತಾವು ಎಷ್ಟು ಹಣವನ್ನು ವಸೂಲುಮಾಡುತ್ತೀರಿ? ಒಂದು ಸೇರು ಅಕ್ಕಿ, ಐದು ರೂಪಾಯಿಗಳು ಅಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಮಾಡಿರಬಹುದು, ನಾವಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಲೆಕ್ಕಪತ್ರ ಇದೆ, ಯಾರು ಬೇಕಾದರೂ ಬಂದು ನೋಡಬಹುದು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ರಾಜಕೀಯ ಪಕ್ಷಗಳು ಚುನಾವಣೆಗಳಿಗೆ ಹಣವನ್ನು ಸಂಗ್ರಹಣೆ ಮಾಡದೆ, ಚುನಾವಣೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಈ ಪಕ್ಷವಾಗಲೀ, ಆ ಪಕ್ಷವಾಗಲೀ ಎಲ್ಲಾ ಪಕ್ಷದವರೂ ಸಹ ದುಡ್ಡು ಖರ್ಚು ಮಾಡದೆ ಎಲೆಕ್ಷನ್ಸ್ ಅನ್ನು ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಯಾರೋ ಒಬ್ಬಿಬರು ನಿಮ್ಮ ಪರವಾಗಿ ಹಣವನ್ನು ಖರ್ಚು ಮಾಡಿದರೆ, ನೀವು ಅವರ ಋಣವನ್ನು ತಿಂದ ಹಾಗೆ ಆಯಿತು. ಅವನಿಗೆ ನೀವು ದಾಸಾನುದಾಸರಾಗಿ ಇರಬೇಕಾಗುತ್ತದೆ. ಅವನಿಗೆ ರಕ್ಷಣೆ ಮಾಡತಕ್ಕ ಪರಿಸ್ಥಿತಿ ಬಂದಾಗ, ಅದು ಕಾನೂನಿನ ಭಾಗದಲ್ಲಿಯೇ ಆಗಲೀ ಅಥವಾ ಕಾನೂನಿನ ಭಾಗದಲ್ಲಿ ಇಲ್ಲದಿದ್ದಾಗಲೂ ಅವನನ್ನು ರಕ್ಷಣೆ ಮಾಡುವುದಕ್ಕೆ ಪ್ರಯತ್ನ ಮಾಡುವುದು ಕರಪ್ಷನ್ ಅಲ್ಲವೇ? ಅವನನ್ನು

ಕಚ್ಚಿಣದ ಕವಚದಿಂದ ತಪ್ಪಿಸತಕ್ಕದ್ದು ಕರಪ್ಷನ್ ಅಲ್ಲವೇ? ಶ್ರೀಮಾನ್ಯ ಜಯಪ್ರಕಾಶ್‌ನಾರಾಯಣ್ ಅವರು ಕರಪ್ಷನ್ ಬಗ್ಗೆ ಬಹಳ ಉದಾರವಾಗಿ ಮಾತನಾಡಿದ್ದಾರೆ. ಸ್ವರಾಜ್ಯ ಮೂವ್‌ಮೆಂಟ್‌ನಲ್ಲಿ ಎಷ್ಟು ಹಣವನ್ನು ಅವರು ಕಲೆಕ್ಟ್ ಮಾಡಿದ್ದಾರೆ, ಅದಕ್ಕೆ ಏನಾದರೂ ಅಕೌಂಟ್ಸ್ ಕೊಟ್ಟಿದ್ದಾರೆಯೇ? ಈ ಹಣದಿಂದ ಎಷ್ಟು ಜನ ಹತ್ತಾರು ವರ್ಷಗಳಿಂದ ಜೀವನ ಮಾಡಿಕೊಂಡು ಬರುತ್ತಿಲ್ಲ? ಇದು ಸಾರ್ವಜನಿಕ ಹಣ ಅಲ್ಲವೇ? ಇದಕ್ಕೆ ಏನೆಂದು ಕರೆಯುತ್ತೀರಿ? ಚುನಾವಣೆಯ ಸಮಯದಲ್ಲಿ ರಾಜಕೀಯ ಪಕ್ಷಗಳಿಗೆ ಬೇಕಾದಷ್ಟು ಫಂಡ್ ಬರುತ್ತದೆ, ಇವರಲ್ಲೇ ಜೀವನ ಮಾಡಿಕೊಂಡು ಹೋಗತಕ್ಕ ಜನರಲ್ಲವೇ? ಇವತ್ತು ನಾವು ಈ ಕರಪ್ಷನ್ ಅನ್ನು ನಿರ್ಮೂಲನ ಮಾಡುವುದಕ್ಕೆ ಹೊರಟ್ಟಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಜಯಪ್ರಕಾಶ್ ನಾರಾಯಣ್ ಅವರು ಸ್ವಂತಕ್ಕೆ ಏನು ಮಾಡಿಕೊಂಡಿದ್ದಾರೆ?

ಶ್ರೀ ಎಸ್ ಎಂ. ಶೀರನಾಳಿ ಚಂದ್ರಶೇಖರ್.—ಅದನ್ನು ನೀವು ಹೇಳಬೇಕು, ಸಾರ್ವಜನಿಕ ಜೀವನದಲ್ಲಿ ನಾವು ಎಷ್ಟು ಎಚ್ಚರಿಕೆಯಿಂದ ಇದ್ದರೂ ಸಾಲದು. ನಾವು ಏನನ್ನೂ ಮಾಡುವುದಿಲ್ಲ ಎಂದು ಕಂಡರೂ ನಮಗೆ ನಾವು ಬಳಿಯುವುದನ್ನು ಜನರು ಬಿಡುವುದಿಲ್ಲ. ಇಂಥ ಒಂದು ಪ್ರವೃತ್ತಿ ಬೆಳೆದು ಬಂದರೆ ಎಷ್ಟು ಕಾಲ ಸಾರ್ವಜನಿಕ ಜೀವನದಲ್ಲಿ ಜನರು ಭಾಗವಹಿಸುವುದಕ್ಕೆ ತಯಾರಾಗುತ್ತಾರೆ ಎನ್ನುವ ಪ್ರಶ್ನೆಯನ್ನು ನಾವೇ ಹಾಕಿಕೊಳ್ಳಬೇಕಾಗುತ್ತದೆ. ಜನರಲೈಸ್ ಮಾಡತಕ್ಕದ್ದು ಇದೆಯೆಲ್ಲಾ ಇದು ಹೋಗಬೇಕು. ನಾವು ಎಷ್ಟು ಕಾಲ ಇದನ್ನು ಸಹಿಸಲಿಕ್ಕೆ ಸಾಧ್ಯವಾಗುತ್ತದೆ? ಬರೀ ೧೦ ರೂಪಾಯಿಗಳನ್ನು ಯಾರಿಂದಲಾದರೂ ತೆಗೆದು ಕೊಂಡರೆ ಮಾತ್ರ ಲಂಚವೇ? ಒಬ್ಬರ ಮನೆಯಲ್ಲಿ ಒಂದು ಹೊತ್ತು ಊಟ ಮಾಡಿದರೆ ಲಂಚವೇ? ನಾನು ಹೇಳುತ್ತೇನೆ. ಒಂದು ಊರಿಗೆ ಒಬ್ಬ ತಹಸೀಲ್ದಾರ್ ಹೋಗುತ್ತಾರೆ, ಅಲ್ಲಿ ಜಮಾಬಂದಿ ನಡೆಯುತ್ತದೆ. ಅವರಿಗೆ ಮೇಜವಾನಿ ಮಾಡಬೇಕು. ಇದನ್ನು ಮಾಡುವವರು ಯಾರು? ಸೇಕ್‌ದಾರರೋ ಅಥವಾ ಶ್ಯಾನುಭೋಗರೋ ಮಾಡಬೇಕು. ಕೋಳಿ ತಿನ್ನುವವರಿಗೆ ಕೋಳಿ ತಿನ್ನಿಸಬೇಕಾಗುತ್ತದೆ. ಎಲ್ಲಾ ಖರ್ಚುಗಳನ್ನು ಇವರು ನೋಡಿಕೊಳ್ಳಬೇಕು. ಈ ಖರ್ಚನ್ನು ಅವನು ತನ್ನ ಪಗಾರದಲ್ಲಿ ಮಾಡಬೇಕಾಗುತ್ತದೆಯೇ? ಅವನಿಗೆ ಹೆಂಡರು ಮಕ್ಕಳು ಇರುತ್ತಾರೆ. ಅವನು ತನ್ನ ಇಲಾಖೆಯಲ್ಲಿ ಹೇಗಾದರೂ ಮಾಡಿ ಈ ಖರ್ಚನ್ನು ಅಡ್ಜಸ್ಟ್ ಮಾಡುವುದಕ್ಕೆ ನೋಡುತ್ತಾನೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ನಾನು ಹೇಳುತ್ತೇನೆ. ಈ ಪದ್ಧತಿ ಏನು ಇದೆ ಇದನ್ನು ಲೀಗಲೈಸ್ ಮಾಡಿದರೆ ಉತ್ತಮ ಎಂದು. ಪ್ರತಿಯೊಬ್ಬ ಆಫೀಸರ್ ಇಷ್ಟಿಷ್ಟು ಹಣವನ್ನು ಕಲೆಕ್ಟ್ ಮಾಡಬೇಕು, ಇಂತಿಂಥ ಕೆಲಸಗಳಿಗೆ ಇಷ್ಟು ಪರ್ಸೆಂಟೇಜ್ ಎಂದು ಮಾಡಿದರೆ ಒಳ್ಳೆಯದು. ವಿಶ್ವವ್ಯಾಪ್ತಿಯಾಗಿ ಬೆಳೆದು ಬಂದಿರತಕ್ಕಂಥ ಈ ಲಂಚಾವತಾರವನ್ನು ಹೋಗಲಾಡಿಸುವುದಕ್ಕೆ ಹಿಂದಿನ ಸರ್ಕಾರಗಳಿಂದಲೂ ಆಗಿಲ್ಲ, ನಮ್ಮ ಸರ್ಕಾರಕ್ಕೂ ಆಗಿಲ್ಲ, ಮುಂದೆಯೂ ಆಗುವುದಿಲ್ಲ ಎನ್ನುವುದು ಅರ್ಥವಾದಾಗ ನಾವು ಇದನ್ನು ಲೀಗಲೈಸ್ ಮಾಡಬಹುದು. ಲೀಗಲೈಸ್ ಮಾಡಿದರೂ ಸಹ ಇದಕ್ಕೆ ಇತಿ ಮಿತಿ ಇಲ್ಲದ ಹಾಗೆ ಲಂಚವನ್ನು ತೆಗೆದುಕೊಳ್ಳುವುದಕ್ಕೆ ಶುರು ಮಾಡುತ್ತಾರೆ. ಆಗ ನಾವು ಮೂಲಭೂತ ಪ್ರಶ್ನೆಗೆ ಬರುತ್ತೇವೆ. ಇದು ಮಾನವೀಯ ಹುಟ್ಟುಗುಣ, ಇದು ಹೋಗಲಿಕ್ಕೆ ಸಾಧ್ಯವಿಲ್ಲ. ವೈಯುಕ್ತಿಕವಾಗಿ ಯೋಚನೆ ಮಾಡೋಣ. ಮೊದಲನೆಯ ಬಾರಿಗೆ ಎಲೆಕ್ಷನ್‌ಗೆ ಒಬ್ಬರು ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಚುನಾವಣೆಗೆ ಸ್ಪರ್ಧಿಸುತ್ತಾರೆ, ಮತ್ತೆ ಐದು ವರ್ಷದಲ್ಲಿ ಎರಡನೆ ಚುನಾವಣೆಯನ್ನು ಮನೆ ಮಠ ಮಾರಾಟ ಮಾಡಿಕೊಂಡು ಸ್ಪರ್ಧಿಸುತ್ತಾರೆ. ಅದೇ ಮನುಷ್ಯ ಮೂರನೆಯ ವರ್ಷದಲ್ಲಿ ಅವನ ಹತ್ತಿರ ಏನೂ ಇರುವುದಿಲ್ಲ, ಅವನಿಗೂ ಹೆಂಡರುಮಕ್ಕಳು ಇರುತ್ತಾರೆ, ಆಗ ಅವರು ನಮಗೆ ವಿಷ ಕೊಡುತ್ತೀರೇನು ಎಂದು ಕೇಳದೆ ಬೇರೆ ವಿಧಿ ಇರುವುದಿಲ್ಲ. ಅದಕ್ಕೆ ಅವರು ಮೂರನೆಯ ವರ್ಷದಲ್ಲಾದರೂ ಏನಾದರೂ ಮಾಡಿಕೊಳ್ಳಬೇಕು ಎಂದು ನೋಡುತ್ತಾರೆ. ಆಗ ಅವರು ಚೇರ್ಮನ್‌ಗಿರಿಗೋ, ಯಾವುದಾದರೂ ಒಂದು ಪದವಿಗೋ ಹೋರಾಟ ಮಾಡಬೇಕಾಗುತ್ತದೆ. ಮನೆಯ ಹೆಂಡತಿಯನ್ನು ಕೈಹಿಡಿಯಬೇಕಾದರೆ, ''ಧರ್ಮೇಚ, ಕರ್ಮೇಚ, ಅರ್ಥೇಚ, ಕಾಮೇಚ ನಾತಿ ಚರಾಮಿ'' ಎಂದು ಹೇಳಿರುತ್ತಾರೆ. ಇಂಥ ವಚನವನ್ನು ಕೊಡಬೇಕಾದರೆ, ಇದು ಅವನ ಮೂಲಭೂತ ಪ್ರಶ್ನೆಯಾಗುತ್ತದೆ. ಈ ಪ್ರಶ್ನೆ ಬಂದಾಗ ಅವನೂ ಸ್ವಲ್ಪಮಟ್ಟಿಗೆ ತನ್ನ ಕಡೆಗೆ ನಿಗ ವಹಿಸಬೇಕಾಗುತ್ತದೆ. ಇಲ್ಲಿಯೂ ಕೂಡ ಲಂಚಾವತಾರ. ಯಾವ ದೃಷ್ಟಿಯಿಂದ ನಾವು ನೋಡಿದರೂ ಕೂಡ ಇದು ಬಂದೇ ಬರುತ್ತದೆ. ಎಲ್ಲಾ ಪಕ್ಷಗಳು ಚುನಾವಣೆಗೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಯಾವ ಅಭ್ಯರ್ಥಿಯೂ ಚುನಾವಣೆಯಲ್ಲಿ ೧೦ ರೂಪಾಯಿಗಳನ್ನು ಖರ್ಚು ಮಾಡಕೂಡದು ಪಕ್ಷ ಮಾಡುತ್ತದೆ ಎಂದು ಹೇಳುವುದಕ್ಕೆ ಸಾಧ್ಯವೇ? ಇದರಿಂದ ನಿಜವಾಗಿಯೂ ನಿಃಸ್ವಾರ್ಥತೆಯಿಂದ ಸೇವೆ ಮಾಡತಕ್ಕಂಥ ಮನಸ್ಸು ಬರುತ್ತದೆ ಎನ್ನುವ ನಿಲುವು ನನ್ನದು. ಪಕ್ಷಗಳು ಚುನಾವಣೆಗೆ ಖರ್ಚುಮಾಡುವುದಕ್ಕೆ ಬದಲಾಗಿ ಅಭ್ಯರ್ಥಿಗಳನ್ನು ಸರ್ಕಾರದವರೇ ನಿಲ್ಲಿಸಿ ಸರ್ಕಾರವೇ ಖರ್ಚು ಮಾಡುವುದಕ್ಕೆ ತೀರ್ಮಾನ ಮಾಡಿದರೆ ಇನ್ನೂ ಉತ್ತಮ.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಜಯಪ್ರಕಾಶ್‌ನಾರಾಯಣ್ ಅವರ ಸಲಹೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಇದು ಅತ್ಯುತ್ಕೃಷ್ಟವಾದ ವಿಚಾರ ಎಂದು ನಾನು ತಿಳಿದುಕೊಂಡಿದ್ದೇನೆ. ಇಂಥ ಸಲಹೆ ಯಾರಿಂದ ಬಂದರೂ ಒಳ್ಳೆಯದು ಎಂದು ತಿಳಿದುಕೊಳ್ಳೋಣ. ಏತಕ್ಕೆಂದರೆ ಇವೊತ್ತಿನ ದಿವಸ ಚುನಾವಣೆ ನಮ್ಮ ವೈರಿಗೂ ಬೇಡ. ಅವನನ್ನು ಕಂಡರೆ ಇವೊ ಆಗುವುದಿಲ್ಲ ಎಂದರೆ ಅವನನ್ನು ಚುನಾವಣೆಗೆ ನಿಲ್ಲಿಸು ಅನ್ನುವ ಪರಿಸ್ಥಿತಿ ಇವೊತ್ತಿನ ದಿವಸ ಇದೆ.

4-00 P.M.

ಶ್ರೀ ಕೋಣಂದೂರು ಲಿಂಗಪ್ಪ.—ಮುಂದಿನ ಚುನಾವಣೆಗೆ ತಾವು ನಿಲ್ಲುತ್ತೀರಾ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಮಗೆ ಏನಾದರೂ ಅಪನಂಬಿಕೆ ಇದೆಯೋ ಹೇಳಿ. ಪ್ರತಿಯೊಂದು ಹಂತದಲ್ಲೂ ಕೂಡ ನಮಗೆ ಕಾಣುತ್ತಾ ಇರುವುದು ಏನೆಂದರೆ ಮೊದಲು ಸರ್ಕಾರೀ ನೌಕರ ವರ್ಗದವರ ಬಗ್ಗೆ ಯೋಚನೆ ಮಾಡೋಣ. ಹಿಂದೆ ಒಂದು ಕಾಲದಲ್ಲಿ ಒಬ್ಬ ತಾಸೀಲ್ದಾರರಿಗೆ ೧೦೦ ರೂಪಾಯಿ ಸಂಬಳ ಬರುತ್ತಿತ್ತು. ಆ ೧೦೦ ರೂಪಾಯಿ ಸಂಬಳ ಬಂದಂದರಲ್ಲಿ ಆತನಿಗೆ ಅವಶ್ಯಕವಾಗಿ ಬೇಕಾದಂಥ ಅಕ್ಕಿ, ಬೆಣ್ಣೆ, ಹಾಲು ಇವೆಲ್ಲಕ್ಕೂ ಸಾಕಾಗುತ್ತಿತ್ತು. ಆವಾಗ ನೋಡಿದರೆ ಇವೆಲ್ಲದರ ಮಾಲಿನ ರೇಟು ಬಹಳ ಕಡಿಮೆ ಇತ್ತು. ಅದನ್ನು ಲೆಕ್ಕ ಹಾಕಿ ನೋಡಿದರೆ ಈ ವೊತ್ತು ಆ ನೌಕರರಿಗೆ ಏರಿರತಕ್ಕಂಥ ಸಂಬಳ ಏತಕ್ಕೂ ಸಾಲದು ಇವೊತ್ತಿನ ದಿವಸ ಒಬ್ಬ ತಹಸೀಲ್ದಾರನಿಗೆ ಮ್ಯಾಕ್ಸಿಮಮ್ ೫೦೦ ರೂಪಾಯಿ ಸಂಬಳ ಬರುತ್ತದೆ ಆದರೆ ಈವೊತ್ತಿನ ಮಾಲಿನ ರೇಟ್ ನೋಡಿದರೆ ಅದರ ೫೦ ರಷ್ಟು ಏರಿದೆ. ಜನಗಳು ಯಾರಾದರೂ ಇದನ್ನು ಲೆಕ್ಕ ಹಾಕಿದರೆ, ಮಾನವ ಸಹಜವಾಗಿ ದಾರಿ ತಪ್ಪತಕ್ಕಂಥಾದ್ದು ಸಹಜವೋ ಏನೋ ಎನ್ನುವುದು ಎಲ್ಲರಿಗೂ ಅರ್ಥವಾಗುತ್ತದೆ. ಹಾಗಾದರೆ ಈವೊತ್ತು ಮನುಷ್ಯನಿಗೆ ಮಿನಿಮಮ್ ನೀಡ್ಸ್ ಇದಯೆಲ್ಲಾ ಅಂದರೆ ಜನತೆಗೆ ಬೇಕಾದಂಥ ಅವಶ್ಯಕವಾದಂಥ ವಸ್ತುಗಳನ್ನು ಒದಗಿಸುವಂಥ ಒಂದು ನಿಲುವನ್ನು ಸರ್ಕಾರ ವಹಿಸಿಕೊಂಡರೆ ಈ ಲಂಚವನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದೇಹೋದರೆ ಒಂದು ಶತಮಾನವಾದರೂ ಕೂಡ ನಿಲ್ಲುವುದು ಕಷ್ಟ. ಯಾವಾಗಲೂ ಮನುಷ್ಯ ಸಂಗ್ರಹ ಮಾಡಬೇಕು ಅಂತ ಹೇಳುವುದು ಮತ್ತು ಬೇಕು ಅನ್ನುವುದು ಒಂದು ಹುಟ್ಟಿನಿಂದ ಬರತಕ್ಕಂಥ ಗುಣ. ಏತಕ್ಕೆಂದರೆ ಮುಂದಿನ ಭವಿಷ್ಯದ ಬಗ್ಗೆ ಅವನಿಗೆ ಒಂದು ಸರಿಯಾದ ಸೆಕ್ಯೂರಿಟಿ ಇಲ್ಲ. ಅದಕ್ಕಾಗಿ ಅವನು ಚಿಂತನೆ ಮಾಡುತ್ತಾನೆ. ನನ್ನನ್ನು ನೋಡಿಕೊಳ್ಳುವುದಕ್ಕೆ ಅಪ್ಪ ಅಮ್ಮ ಇದ್ದಾರೆ ಅಂತ ಒಂದು ಧೈರ್ಯ ಇದ್ದರೆ ಆವಾಗ ಪ್ರತಿಯೊಬ್ಬ ಮನುಷ್ಯನಿಂದಲೂ ಕೂಡ ಇಂತಹ ದುರ್ವ್ಯವಹಾರ ನಡೆಯುವುದಿಲ್ಲ ಮತ್ತು ಯಾವ ಆಸೆಆಮಿಷಗಳಿಗೂ ಅವನು ಬಲಿಯಾಗುವುದಿಲ್ಲ, ಇದು ನನ್ನ ವಾದ! ಮತ್ತು ಈ ಬಗ್ಗೆ ಸಮಾಜ ಕೂಡ ರಕ್ಷಣೆ ಮಾಡತಕ್ಕಂಥ ಒಂದು ವ್ಯವಸ್ಥೆಗೆ ಬಂದರೆ ಆವಾಗ ಅವನು ಯಾವುದಕ್ಕೂ ಕೂಡ ಚಿಂತನೆ ಮಾಡಬೇಕಾದ್ದಿಲ್ಲ. ಯಾವ ಒಂದು ವಿದ್ಯೆಗಾಗಲಿ, ಯಾವ ಒಂದು ಆಸ್ತಿಗಾಗಲಿ, ಯಾವ ಒಂದು ವ್ಯವಸ್ಥೆಯಾಗಲಿ ಸಮಾಜವೇ ನೋಡಿಕೊಳ್ಳುವುದಾದರೆ ಅಥವಾ ಸರ್ಕಾರವೇ ನೋಡಿಕೊಳ್ಳುವುದಾದರೆ ಆವಾಗ ಆತ ಯಾವ ಲಂಚಕ್ಕೂ ಕೈ ಒಡ್ಡುವುದಿಲ್ಲ ಮತ್ತೆ ಯಾವುದಕ್ಕೂ ಒಡ್ಡುವುದಿಲ್ಲ. ಏತಕ್ಕೆಂದರೆ.

ತನ್ನ ಭವಿಷ್ಯದ ಬಗ್ಗೆ ಅವನಿಗೆ ಚಿಂತನ ಇರುವುದಿಲ್ಲ. ಅವನು ಹಣ ತೆಗೆದುಕೊಂಡು ಏನು ಮಾಡಬೇಕು, ಅದೇನು ನುಂಗುವುದಕ್ಕೆ ಬರುತ್ತದೆಯೇ ? ಏನಾದರೂ ನುಂಗುವುದಕ್ಕೆ ಬಂದರೆ ಅದನ್ನು ಅರಗಿಸಿಕೊಳ್ಳಬಹುದು. ಆದರೆ ಇವೊತ್ತಿನ ದಿವಸ ಹಣಕ್ಕೆ ಬೆಲೆ ಇದೆ, ಇದಕ್ಕೆ ನಮ್ಮ ಸಮಾಜದ ಪರಿಸ್ಥಿತಿಯೂ ಒಂದು ಕಾರಣ. ದುಡ್ಡಿದ್ದವನು ದೊಡ್ಡಪ್ಪ ಅಂದಹಾಗೆ ಯಾರ ಕೈಯಲ್ಲಿ ದುಡ್ಡು ಇದೆ ಅವನನ್ನು ಕೇಳುತ್ತಾರೆ ಯಾರ ಕೈಯ್ಯಲ್ಲಿ ದುಡ್ಡು ಇಲ್ಲ ಅವನನ್ನು ಕೇಳುವುದಿಲ್ಲ. ಯಾವನಾದರೂ ದುಡ್ಡು ಇರುವವನು ಕಾಫಿ ಕುಡಿಯುವುದಕ್ಕೆ, ಟೀ ಕುಡಿಯುವುದಕ್ಕೆ ಹೋದರೆ ಅವರು ಬಂದರು ಮಣೆ ಹಾಕಿ ಕುರಿಸಪ್ಪಾ ಎಂದು ಕೂರಿಸುತ್ತಾರೆ. ದುಡ್ಡಿಗೆ ಇರತಕ್ಕಂಥ ಬೆಲೆ ಇಂದು ಮನುಷ್ಯನ ಯೋಗ್ಯತೆಗೆ ಇಲ್ಲ, ಮನುಷ್ಯನ ಅಳಿಯುವ ಅಭ್ಯಾಸಕ್ಕೆ ನಡೆನುಡಿಗೆ ಬೆಲೆ ಇಲ್ಲ, ಇವೊತ್ತು ಅಂಥಾವರು ದುಡ್ಡಿಮಂಗೆ ಹೋಗುತ್ತಾರೆ. ಇದನ್ನು ಹೇಳಿದರೆ ನಮ್ಮ ಸ್ನೇಹಿತರು ಒಪ್ಪಿಕೊಳ್ಳುತ್ತಾರೆ. ಈ ಮೂಲಭೂತ ಪ್ರಶ್ನೆ ಏನಿದೆ ಅದಕ್ಕೆ ನಾನು ವ್ಯತ್ಯಾಸ ಕೇಳುತ್ತೇನೆ. ಇವೊತ್ತು ಹಣಕ್ಕೆ ಬೆಲೆ ಕೊಡುತ್ತಾ ಇರುವುದರಿಂದ ಹಣ ಇದ್ದವರೇ ದೊಡ್ಡವರು ಎಂದು ಅವರಿಗೆ ಬೆಲೆ ಬೆಲೆ ಕೊಡುತ್ತಾ ಇರುವುದರಿಂದ ಆ ಅಧಿಕಾರಿಯಲ್ಲಿ ಒಂದು ರೀತಿಯ ಉದಾಸೀನ ಮನೋಭಾವ ಬಂದೇ ಬರುತ್ತದೆ. ಯಾವನಾದರೂ ಕೂಲಿಗಡುಕನಾಗಿರಲಿ ಅಥವಾ ಅವನು ಯಾರಿಗಾದರೂ ಹಿಂಸೆ ಕೊಟ್ಟಿರಲಿ, ದುಡ್ಡು ಚೆನ್ನಾಗಿದ್ದು ಒಳ್ಳೆಯ ಬಟ್ಟೆ ಹಾಕಿಕೊಂಡಿದ್ದರೆ ಅವನಿಗೆ ಒಡ್ಡೋಲಗ ಮಾಡುತ್ತಾರೆ. ಪಾಪ ಇವನ ಹತ್ತಿರ ಏನೂ ಇರುವುದಿಲ್ಲ. ಅದನ್ನು ನಾವು ಮೂಲಭೂತವಾಗಿ ತಿಳಿದುಕೊಳ್ಳಬೇಕಾದಂಥ ವಿಷಯ, ಇವೆಲ್ಲಾ ಹಾದಿಬೀದಿ ಮಾತಾಗುತ್ತದೆ.

ಆದುದರಿಂದ ನಾವು ಈ ಬಗ್ಗೆ ಕೂತು ಒಂದು ನಿರ್ಣಯ ಮಾಡೋಣ. ಒಂದು ಗೊತ್ತಾದ ದಿನ ಕೂತು ಕೊಂಡು ಈ ಲಂಚವನ್ನು ನಿರ್ಮೂಲನಾ ಮಾಡಬೇಕು ಎಂದು ಒಂದು ನಿರ್ಣಯ ತೆಗೆದುಕೊಳ್ಳೋಣ. ಅವನು ೮ ಆಣೆ ತೆಗೆದುಕೊಂಡವ ಎಂದು ಮಾಫಿ ಮಾಡುವುದಲ್ಲ, ಇವನ್ನು ಒಂದು ರೂಪಾಯಿ ತೆಗೆದು ಕೊಂಡವ ಎಂದು ಮಾಫಿ ಮಾಡುವ ಪ್ರಶ್ನೆ ಇಲ್ಲ. ಇದನ್ನು ಪ್ರತಿಯೊಂದು ಹಂತದಲ್ಲೂ ಕೂಡ ನಿರ್ಮೂಲನಾ ಮಾಡಬೇಕು ಎನ್ನುವ ಒಂದು ಶಪಥವನ್ನು ಎಲ್ಲರೂ ತೆಗೆದುಕೊಳ್ಳಬೇಕು. ಒಂದು ವರ್ಷದಲ್ಲಿ ತೆಗೆದುಕೊಂಡು ಇನ್ನೊಂದು ವರ್ಷದಲ್ಲಿ ಬಿಟ್ಟುಬಿಟ್ಟರೆ ಅಂದು ಲಂಚ ನಿರ್ಮೂಲನಾ ಆಗುವುದಿಲ್ಲ. ಇದನ್ನು ತಾವು ಒಪ್ಪಬೇಕು. ಇನ್ನೊಂದು ಪ್ರಶ್ನೆ ಏನೆಂದರೆ ನಮ್ಮ ಸಂಸ್ಕೃತಿ ಬಗ್ಗೆ ಹೇಳುವುದಾದರೆ ಯಾವನಾದರೂ ಒಬ್ಬ ಒಂದು ಒಳ್ಳೆಯ ಕೆಲಸ ಮಾಡಿಕೊಟ್ಟರೆ ಅವನಿಗೆ ಕಾಫಿ ಕೊಟ್ಟು, ಟೀ ಕೊಟ್ಟು ಒಂದು ಕವರ್‌ನಲ್ಲಿ ಬೆಚ್ಚಗೆ ಇಟ್ಟು ಕೊಡುವುದು ಇದ್ದರೆ ಅದನ್ನು ಲಂಚ ಎಂದು ಹೇಳುವುದಿಲ್ಲ. ಮರ್ಯಾದೆಯಿಂದ ಅವನು ಕೊಡುತ್ತಾನೆ. ಆರೀತಿ ತೆಗೆದುಕೊಂಡರೆ ಅದು ವಿಧಿಯಿಲ್ಲ. ಆದರೆ ಬಡವರಿಂದ ಏನು ವಸೂಲ್ ಮಾಡುತ್ತಾರೋ ಈ ದುರ್ವ್ಯವಸ್ಥೆ ಹೋದಹೊರತು ನಮ್ಮ ದೇಶ ಸುಭದ್ರವಾಗುವುದಿಲ್ಲ. ಹೀಗಾದರೆ ನಮ್ಮ ಸರ್ಕಾರದ ಮೂಲಭೂತ ತತ್ವಗಳು ಏನು ಇವೆಯೋ ಅದಕ್ಕೆ ಕುಂಠಿತವಾತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಕೇಂದ್ರ ಸರ್ಕಾರದವರು ೧೯೭೨ನೇ ಇಸವಿ ಆದನಂತರ ಒಂದು ಆಜ್ಞೆ ಹೊರಡಿಸಿದರು. ಈ ದೇಶದಲ್ಲಿ ಯಾರಿಗೆ ಮನೆ ಇಲ್ಲ ಅವರಿಗೆ ಮನೆ ಕಟ್ಟಿಕೊಳ್ಳಲಿಕ್ಕೆ, ಯಾರಿಗೆ ಜಾಗ ಇಲ್ಲ ಅವರಿಗೆ ಜಾಗ ಕೊಡಲಿಕ್ಕೆ, ಈ ರೀತಿಯಾಗಿ ಒಂದು ಟೈಂ ಬೌಂಡ್ ಪ್ರೋಗ್ರಾಂ ಹಾಕಿಕೊಂಡು ಅದನ್ನು ನಮ್ಮ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಇದು ಒಂದು ದೊಡ್ಡ ಯಜ್ಞ ಎಂತಲೇ ಹೇಳಬಹುದು. ಹೇಗೆಂದರೆ ಈ ಬಡವರ ಸೇವೆ ಮಾಡತಕ್ಕಂಥಾವನು ಇದರಲ್ಲಿ ಪುಣ್ಯ ಕೆಲಸ ಮಾಡತಕ್ಕಂಥಾವನು ಏನು ಮಾಡಿದ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಅವನು ಬಹಳ ನಿಸ್ಸೀಮನಾದಂಥಾವನು. ನಮ್ಮ ಹೊಸನಗರ ತಾಲ್ಲೂಕು ಹುಂಚ ಹೋಬಳಿ ರೆವಿನ್ಯೂ ಇನ್‌ಸ್ಪೆಕ್ಟರ ರಾಮರಾವ್ ಅನ್ನುವ ಪುಣ್ಯಾತ್ಮ ಒಂದೊಂದು ಮನೆ ಸ್ಯಾಂಕ್ಷನ್ ಮಾಡುವುದಕ್ಕೆ ೨೫೦—೩೦೦ ರೂಪಾಯಿ ತೆಗೆದುಕೊಳ್ಳುತ್ತಾನೆ. ನಾನು ಅವನನ್ನು ಕರೆದು ಹೇಳಿದೆ. ದುಡ್ಡಿದ್ದವರ ಹತ್ತಿರ ಒಂದು ಪರ್ಮಿಟ್ ಕೊಟ್ಟೋ ಏನಾದರೂ ಹೊಡಕೋ ಆದರೆ ಈ ಬಡವರ ಹತ್ತಿರ, ಈ ಹರಕು ಅಂಗಿಯನ್ನು ಹಾಕಿಕೊಂಡವರ ಹತ್ತಿರ, ಅವರು ಒಂದು ದಿವಸವು ದುಡಿದರೆ ೩ ರೂಪಾಯಿ ಸಿಗುವುದಿಲ್ಲ, ಆತನು ದುಡಿಯುವುದು ಗಂಜಿಗೂ ಆಗುವುದಿಲ್ಲ ಅವನ ಹತ್ತಿರ ನೀನು ತೆಗೆದುಕೊಳ್ಳುವುದಾದರೆ ನೀವು ಯಾವ ನರಕಕ್ಕೆ ಹೋಗಬೇಕು ಅಂತ ಕೇಳಿದೆ. ಅದು ನನ್ನ ಚಿಂತನೆ. ಪ್ರತಿಯೊಂದು ಕೆಲಸಕ್ಕೂ ಕೂಡ ಅದಕ್ಕೇನಾದರೂ ಬಿಸಿ ತಾಗದೇ, ಟೇಬಲ್ ಮೇಲೆ ಫೈಲು ಹೋಗುವುದಿಲ್ಲ, ಕೈ ಕಾಲು ಬರುವುದೂ ಇಲ್ಲ. ಹೀಗಾಗಿ ಆ ಕೆಲಸ ಸ್ಥಗಿತವಾಗಿ ನಿಂತಿವೆ. ಇದರಿಂದೇನಾಗಿದೆ ಎಂದರೆ ಆಫೀಸುಗಳಲ್ಲಿ ನಡೆಯುವ ಕೆಲಸಕಾರ್ಯಗಳಲ್ಲಿ ಸರಿಯಾಗಿ ಕೆಲಸಗಳಾಗುವುದಿಲ್ಲ ಮತ್ತು ತುಂಬಾ ವಿಳಂಬ ಆಗುತ್ತದೆ. ಹೀಗಾಗುವುದಕ್ಕೆ ಕಾರಣವೇನು ? ಎಲ್ಲಿ ಕೆಲಸಗಳು ಬೇಗ ಆಗಬೇಕೋ ಅಲ್ಲಿ ಕೆಲಸಗಳಾಗುವುದಿಲ್ಲ. ಫೈಲು ಮೇಲೆ 'ಕಾಲ್ ಫಾರ್ ರಿಪೋರ್ಟು' ಎಂದು ಬರೆದರೆ ಸಾಕು ಇದು ಶೇಕದಾರನ ಬಳಿಗೆ ಬಂದೇ ಬರುತ್ತದೆ. ಶೇಕದಾರರು ಏನು ಮಾಡುತ್ತಾರೆಂದರೆ ಅದನ್ನು ನೋಡಿಕೊಂಡು ಇದರಲ್ಲೇನೋ ಜೇನುತುಪ್ಪ ತಿನ್ನುವುದಕ್ಕೆ ಇದೆ ಎಂದು ಅವರು ಆ ಫೈಲನ್ನು ಭದ್ರಪಡಿಸುತ್ತಾರೆ. ಆನಂತರ ಯಾರು ದರಖಾಸ್ತು ಪಡೆಯಬೇಕೆಂದು ಹಸಿದಿರುವ ಜನರು ಎಂದಿದ್ದರೂ ಅವರ ಬಳಿ ಬರುತ್ತಾರೆಂದು ಅವರಿಗೆ ಗೊತ್ತು. ಉದಾಹರಣೆಗೆ ಹೇಳುವುದಾದರೆ ಅಕ್ಕ ಪಕ್ಕ ಮನೆಯವರು ಒಂದು ದರಖಾಸ್ತಿಗ ಅರ್ಜಿ ಹಾಕಿರುತ್ತಾರೆ. ಇದರಲ್ಲಿ ಸೋಮಣ್ಣ ಎನ್ನುವವರು ಹತ್ತು ರೂಪಾಯಿಗಳನ್ನು ಶೇಕದಾರರಿಗೆ ಕೊಟ್ಟು ಬರುತ್ತೇನೆ. ಎಂದು ಹೋಗುತ್ತಾರೆ. ಆದರೆ ಇದನ್ನು ತಿಳಿದ ಭೀಮಣ್ಣ ಎನ್ನುವ ಇನೊಬ್ಬರು ಇಪ್ಪತ್ತು ರೂಪಾಯಿ ಕೊಡುತ್ತೇನೆ ಎಂದು ಅವರ ಬಳಿಗೆ ಹೋಗುತ್ತಾರೆ. ಹೀಗೆ ಇದರಲ್ಲಿ ಒಂದು ರೀತಿಯಾದ ಪೈಪೋಟಿ ವ್ಯಾಪಾರ ಶುರುವಾಗಿ ಲಂಚ ಕೊಡುತ್ತಾರೆ. ಒಂದು ಸರ್ವೆ ನಂಬರಿನಲ್ಲಿ ದರಖಾಸ್ತು ಜಮೀನು ಬೇಕೆಂದು ಇಬ್ಬರೂ ಒಂದೇ ಸರ್ವೆ ನಂಬರಿಗೆ ಹಾಕಿದಾಗ ಇಂತಹ ಲಂಚದ ವ್ಯಾಪಾರಗಳು ನಡೆಯುತ್ತಿರುತ್ತವೆ. ಇದು ಸರ್ವೆ ಸಾಮಾನ್ಯವಾಗಿ ಇಂದೂ ನಡೆದುಕೊಂಡು ಬರುತ್ತಿದೆ. ಹೇಗಾದರೂ ಮಾಡಿ ದರಖಾಸ್ತು ಜಮೀನನ್ನು ಹೊಡೆದುಕೊಳ್ಳಬೇಕೆಂದು ಹೀಗೆ ಮಾಡುತ್ತಾರೆ. ಇದಕ್ಕೆ ಆದಿಯೂ ಇಲ್ಲ ಅಂತ್ಯವೂ ಇಲ್ಲ. ಹಠದ ಮೇಲೆ ಒಬ್ಬರನ್ನು ಇನ್ನೊಬ್ಬರ ಮೇಲೆ ಎತ್ತಿಕಟ್ಟುವುದು, ಮತ್ತು ಪೋಲೀಸಿನವರಿಗೆ ಯಾರಾದರೂ ದೂರು ಕೊಡಲು ಹೋದರೆ ದೂರು ಕೊಟ್ಟವರನ್ನೇ ಹಿಡಿದುಕೊಂಡು ಅವರಿಂದ ಲಂಚ ಪಡೆಯುವುದು, ದುಡ್ಡು ಕೊಡದೇ ಇದ್ದರೆ ಅಂತಹವರನ್ನ ಹೊಡೆಸುವುದು ಇಂತಹ ನೂರಾರು ರೀತಿಯ ಕೆಲಸಗಳು ಹದ್ದುಬಸ್ತುಗಳು ಇಲ್ಲದೇ ಇನ್ನೂ ನಡೆಯುತ್ತಿವೆ. ಇದನ್ನು ತಡೆಗಟ್ಟುವವರೇ ಇಲ್ಲವೋ ಎನ್ನುವಂತೆ ಆಗಿದೆ. ಇದಕ್ಕಾಗಿ ನಾನು ಸಲಹೆ ಮಾಡುವುದು ಪ್ರತಿಯೊಬ್ಬರಿಗೂ ಒಂದು ರೀತಿಯಾದ ಸೆಕ್ಯೂರಿಟಿ ಆಫ್ ಲೈಫ್ ಇರಬೇಕು ಎಂದು. ಲಂಚವನ್ನು ಹೇಗೆ ನಿರ್ಮೂಲ ಮಾಡಲು ಸಾಧ್ಯ ಎನ್ನುವುದನ್ನು ನಾವೆಲ್ಲರೂ ಕೂಲಂಕಷವಾಗಿ ವಿಚಾರ ಮಾಡುವುದು ಅತ್ಯಗತ್ಯವಾಗಿದೆ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು).—ಮಾನ್ಯ ಅಧ್ಯಕ್ಷರೇ, ಶ್ರೀ ರಾಮಣ್ಣನವರು ತಂದಿರತಕ್ಕ ನಿರ್ಣಯವನ್ನು ಸ್ವಲ್ಪಮಟ್ಟಿಗೆ ವಿರೋಧ ಮಾಡುತ್ತಾ ಕೆಲವು ಸಲಹೆಗಳನ್ನು ಕೊಡಲು ಇಚ್ಛೆ ಪಡುತ್ತೇನೆ. ಲಂಚ, ಲಂಚ ಎಂದು ಹೇಳುತ್ತಿರುವುದು ಇವೊತ್ತಿನ ಮಾತಲ್ಲ, ಬಹು ದಿನದಿಂದಲೂ ಲಂಚ ಎನ್ನುವುದು ಇದ್ದೇ ಇದೆ, ಆದರೆ ಇದನ್ನು ಹೇಗೆ ನಿರ್ಮೂಲ ಮಾಡಬೇಕು ಎನ್ನತಕ್ಕ ಸಲಹೆಯನ್ನು ಮಾತ್ರ ಎಲ್ಲರೂ ಇಲ್ಲಿ ಯೋಚನೆ ಮಾಡತಕ್ಕ ಅಂಶವಾಗಿದೆ. ಲಂಚ ಎನ್ನುವುದು ಯಾವ ರೀತಿ ಬೆಳೆಯುತ್ತಿದೆ ಮತ್ತು ಇದನ್ನು ಹೇಗೆ ಅಪೇಕ್ಷೆ ಮಾಡುತ್ತಾರೆ ಎನ್ನುವ ವಿವರಗಳನ್ನೆಲ್ಲಾ ಈಗ ತಾನೇ ಮಾನ್ಯ ಸದಸ್ಯರಾದ ಶ್ರೀ ಶೀರನಾಳಿ ಚಂದ್ರಶೇಖರ್‌ರವರು ವಿಸ್ತಾರವಾಗಿ ಹೇಳಿದ್ದಾರೆ. ಊಟ ಮಾಡುವುದರಿಂದ ಹಿಡಿದು ಯಾವ ರೀತಿ ಲಂಚ ಪಡೆಯುತ್ತಾರೆ ಮತ್ತು ಹೇಗೆ ಲಂಚದಿಂದ ಅಧಿಕಾರಿಗಳ ಮನ ಒಲಿಸುತ್ತಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಆದರೆ ಇದನ್ನು ನಿರ್ಮೂಲ ಮಾಡುವ ವಿಚಾರದಲ್ಲಿ ಬಹಳ ಹಿರಿಯರಾದ ಮಹನೀಯರೂ ಹಾಗೂ ಅನೇಕ ಅಧಿಕಾರಿಗಳೂ ಇದುವರೆಗೆ ಯೋಚನೆ ಮಾಡಲಿಲ್ಲ. ಇದರಲ್ಲಿ ಲಂಚ ಕೊಡುವವರ, ಹಾಗೂ ತೆಗೆದುಕೊಳ್ಳುವವರು ಇಬ್ಬರೂ ಒಂದಾದರೆ ಲಂಚ ಎನ್ನುವುದನ್ನು ಹೇಗೆ ತಾನೇ ನಿರ್ಮೂಲ ಮಾಡಲು ಸಾಧ್ಯ ? ಇದನ್ನು ಖಂಡಿತ ನಿರ್ಮೂಲ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಹೇಳುತ್ತೇನೆ. ಲಂಚವಿಲ್ಲದಿದ್ದರೆ ಯಾವ ಕೆಲಸವೂ ಆಗುವುದಿಲ್ಲ ಎನ್ನುವ ಒಂದು ಮನೋಭಾವ ಬೆಳೆಯುತ್ತ ಬರುತ್ತಿದೆ. ಇಂದು ಲಂಚ ಎನ್ನುವುದು ಯಾವ ಇಲಾಖೆಯಲ್ಲಿ ಇಲ್ಲ ? ಯಾವ ಸಾರ್ವಜನಿಕ ಕ್ಷೇತ್ರದಲ್ಲಿ ಇಲ್ಲ ? ಯಾವ ಕಾರ್ಪೊರೇಷನ್‌ನಲ್ಲಿ ಇಲ್ಲ ? ಅಲ್ಲಿ ಇಲ್ಲಿ ಅಲ್ಪಸ್ವಲ್ಪ ಇರಬಹುದು ಎಂದು ಹೇಳಿದರೆ ಅದನ್ನು ನಾವು ಒಪ್ಪಿಕೊಳ್ಳಬಹುದು. ಆದರೆ ಇದು ಎಲ್ಲ ಕಡೆಯಲ್ಲೂ ವ್ಯಾಪಕವಾಗಿರುವ ಇದನ್ನು ನಿರ್ಮೂಲ ಮಾಡಲು ಹೇಗೆ ತಾನೇ ಸಾಧ್ಯ ? ಇದನ್ನು ನಾವೆಲ್ಲರೂ ಯೋಚನೆ ಮಾಡತಕ್ಕ ಅಂಶವಾಗಿದೆ. ಮುಖ್ಯವಾಗಿ ಇದಕ್ಕೆ ನಮ್ಮ ದೇಶದಲ್ಲಿರುವ ಬಡತನವೇ ಕಾರಣ ಮತ್ತು ಇದರ ಮಧ್ಯದಲ್ಲಿ ಅನೇಕ ವಿಚಾರಗಳು ಬರುತ್ತವೆ. ಒಬ್ಬ ಬಡವನಾದವನು ತನ್ನ ಪಕ್ಕದ ಮನೆಯಲ್ಲಿ ನಾಲ್ಕು ಅಂತಸ್ತಿನ ಒಬ್ಬ ಶ್ರೀಮಂತ ಕಾರು ಇಟ್ಟುಕೊಂಡು ಓಡಾಡುತ್ತಿರುವುದನ್ನು ನೋಡಿದರೆ, ತಾನೂ ಕೂಡ ಆ ಶ್ರೀಮಂತನಂತೆ ಬಾಳುವೆ ಮಾಡುವುದನ್ನು ಏತಕ್ಕೆ ಕಲಿಯಬಾರದು ಎಂದು ಯೋಚನೆ ಮಾಡುತ್ತಾನೆ. ಇದರಿಂದಾಗಿ ಅವನು ಕೂಡ ಮುಂದೆ ಬರಲು ಯಾವ ರೀತಿ ಹೋಗಬಹುದು ಎಂದು ಯೋಚನೆ ಮಾಡುತ್ತಾನೆ. ಹೀಗಿರುವ ಲಂಚವನ್ನು ನಿರ್ಮೂಲ ಮಾಡುವುದಾದರೂ ಹೇಗೆ ? ನಮ್ಮ ಸರಕಾರದಲ್ಲಿ ಲಂಚವನ್ನು ನಿರ್ಮೂಲ ಮಾಡುವುದಕ್ಕಾಗಿ ಆಂಟಿ ಕರಪ್ಷನ್ ಇಲಾಖೆ ಇದೆ. ಈ ಇಲಾಖೆ ಆಡಳಿತ ಮಟ್ಟದಲ್ಲಿ ಯಾವ ರೀತಿ ಕೆಲಸ ಮಾಡುತ್ತಿದೆ ಮತ್ತು ಎಷ್ಟರ ಮಟ್ಟಿಗೆ ಲಂಚವನ್ನು ನಿರ್ಮೂಲ ಮಾಡುವುದರಲ್ಲಿ ಸಫಲವಾಗಿದೆ ಎಂದು ಹೇಳುವುದು ಮಾತ್ರ ಕಷ್ಟ. ಇದರಲ್ಲಿ ಲಂಚ ತೆಗೆದುಕೊಂಡ ಮನುಷ್ಯ, ಹಾಗೂ ಲಂಚ ಕೊಟ್ಟವನು, ಇಬ್ಬರೂ ಒಂದಾಗಿ ಬಿಟ್ಟರೆ ಈ ಇಲಾಖೆಯು ಅಧಿಕಾರಿಗಳನ್ನು ಯಾರನ್ನು ಹಿಡಿಯಬೇಕು ? ಇದು ಬಹು ಕಷ್ಟದ ಕೆಲಸ. ಇದಕ್ಕಾಗಿ ನಾನು ಹೇಳುವುದು ಏನೆಂದರೆ ಇಂದು ರಾಜ್ಯದಲ್ಲಿ ಯಾವ ರೀತಿ ವಿದ್ಯಾಭ್ಯಾಸದ ಶಿಕ್ಷಣ ಕೊಡುತ್ತಿದ್ದೇವೆ ಮತ್ತು ಇದರಿಂದ ನಮ್ಮ ಸಂಸ್ಕೃತಿ ಯಾವ ರೀತಿ ಮುಂದಕ್ಕೆ ಬರಲು ಸಾಧ್ಯ ಎನ್ನುವುದನ್ನು ನಾವು ಯೋಚನೆ ಮಾಡುವುದು ಅತ್ಯಂತ ಅವಶ್ಯಕ. ನಮ್ಮ ದೇಶದಲ್ಲಿ ಲಂಚವನ್ನು ನಿರ್ಮೂಲ ಮಾಡಬೇಕು ಎನ್ನುವ ಮನೋಭಾವ ಸರಕಾರದ ಅಧಿಕಾರಿಗಳಲ್ಲಿ ಬರಬೇಕು. ಅದು ಬರುವವರೆಗೂ ಲಂಚವನ್ನು ನಿರ್ಮೂಲ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಾರ್ವಜನಿಕರೂ ಕೂಡ ಇನ್ನು ಮುಂದೆ ಯಾವ ವಿಧವಾದ ಲಂಚವನ್ನು ಕೊಡುವುದಿಲ್ಲ ಎಂದು ನಿರ್ಧಾರ ಮಾಡಿದರೆ ಆಗ ಒಂದು ವೇಳೇ ಲಂಚವನ್ನು ನಿರ್ಮೂಲ ಮಾಡಲು ಸಾಧ್ಯವಾಗುತ್ತದೆ ಮತ್ತು ಅಧಿಕಾರಿಗಳೂ ಇದು ನಮ್ಮ ಕರ್ತವ್ಯ ಎಂದು ತಮ್ಮ ಕೆಲಸಗಳನ್ನು ಮಾಡಿದರೆ ಆಗ ಲಂಚವನ್ನು ನಿರ್ಮೂಲ ಮಾಡಲೂ ಸಹಾಯವಾಗುತ್ತದೆ. ನಮ್ಮ ದೇಶದ ಸಂಪತ್ತು ಬೆಳೆಯಬೇಕಾದರೆ, ನಮ್ಮ ದೇಶದಲ್ಲಿ ಉತ್ಪಾದನೆಯನ್ನು ಜಾಸ್ತಿ ಮಾಡಬೇಕಾದರೆ, ಸರ್ವೆ ಸಾಮಾನ್ಯವಾಗಿ ಎಲ್ಲ ಅನುಕೂಲತೆಗಳನ್ನು ಅವರಿಗೆ ಒದಗಿಸಿಕೊಡಬೇಕು ಮತ್ತು ಸಾಮಾನ್ಯ ಮನುಷ್ಯನಿಗೆ ಅಲ್ಲಿ ಅತ್ಯಗತ್ಯವಾದ ವಸ್ತುಗಳನ್ನೆಲ್ಲಾ ಸಿಗುವಂತೆ ಮಾಡಬೇಕು. ಹಾಗೆ ಮಾಡಿದರೆ ಲಂಚ ಕಮ್ಮಿಯಾಗಬಹುದು. ಲಂಚ ನಿರ್ಮೂಲ ಮಾಡಬೇಕಾದರೆ ಹೇಗೆ ಮಾಡಬೇಕು ಎನ್ನುವುದನ್ನು ಪ್ರತಿಯೊಬ್ಬ ಅಧಿಕಾರಿಗಳೂ ಹಾಗೂ ಸಾರ್ವಜನಿಕರೂ ಕೂಡ ತೀವ್ರವಾಗಿ ಯೋಚನೆ ಮಾಡಬೇಕು. ಲಂಚಕೋರರನ್ನು ಎಂದರೆ ಕಳ್ಳಸಾಗಾಣಿಕೆ ಮಾಡುವವರನ್ನು ನೇಣು ಹಾಕಬೇಕು, ಲಂಚಕೋರ ಅಧಿಕಾರಿಗಳನ್ನು ಷೂಟ್ ಮಾಡಬೇಕು. ಯಾರು ಸ್ಮಗ್ಲರ್ಸ್ ಎಂದು ಹೇಳುತ್ತಾರೆ ಅಂತಹವರನ್ನು ಹಿಡಿದು ನೇಣು ಹಾಕಬೇಕು. ಆಗ ಸ್ವಲ್ಪ ಮಟ್ಟಿಗೆ ಲಂಚವನ್ನು ಕಡಿಮೆ ಮಾಡಬಹುದು. ಲಂಚ ತೆಗೆದುಕೊಳ್ಳುವವರು ಶಿಕ್ಷಾರ್ಹರು ಎಂದು ಮಾಡಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಯಾರೂ ಮೊದಲಿನಿಂದಲೂ ಲಂಚ ನಿರ್ಮೂಲ ಮಾಡಬೇಕೆಂದು ಹೇಳುತ್ತಾರೋ ಅಂತಹವರೇ, ಇಂದು ನಿಮ್ಮ ಪಕ್ಷದಲ್ಲಿರುವ ರಾಜಕಾರಣಿಗಳು, ಬಂದು ಇಲ್ಲಿ ನಾಳೆ ಅವರು ಶಿಕ್ಷಾರ್ಹರಲ್ಲ ಎನ್ನುತ್ತಾರೆ. ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ವಿ. ಕೃಷ್ಣರಾವ್.— ಇದಕ್ಕೆ ಒಂದು ಉಗ್ರವಾದ ಕಾನೂನು ನಮ್ಮ ದೇಶದ ಮುಂದೆ ಬರಬೇಕು, ಅದರ ಜೊತೆಗೆ ಸಾರ್ವಜನಿಕರೂ ಕೂಡ ಈ ಲಂಚವನ್ನು ವಿರೋಧಮಾಡುವ ಬಗ್ಗೆ ಹೋರಾಟ ಮಾಡಬೇಕು ಈ ಕೆಲಸ ಕೇವಲ ಒಬ್ಬ ಅಧಿಕಾರಿಯಿಂದ ಆಗುವುದಿಲ್ಲ. ಸಾರ್ವಜನಿಕರೂ ಸಹ ಇದರ ಜೊತೆಗೆ ಸಹಕರಿಸಬೇಕು. ಲಂಚ ಕೊಡಬಾರದು, ಅದನ್ನು ಕೊಟ್ಟರೆ ಅಪರಾಧವಾಗುತ್ತದೆ ಎಂಬ ಅಂಶವನ್ನು ಸಾರ್ವಜನಿಕರ ತಲೆಗೆ ಹಿಡಿಯುವಂತೆ ಮಾಡಲು ಶಿಕ್ಷಣ ಕೊಡುವ ಪದ್ಧತಿಯನ್ನು ಜಾರಿಗೆ ತರಬೇಕು. ಲಂಚ ಎಂಬುದನ್ನು ಸಾಧ್ಯವಾದಷ್ಟಿಗೆ ಕಡಿಮೆ ಮಾಡಲು ಸರ್ಕಾರದವರು ಮತ್ತು ಸಾರ್ವಜನಿಕರು ಸೇರಿಕೊಂಡು ಒಂದು ಯೋಜನೆಯನ್ನು ಹಾಕಿಕೊಳ್ಳದಿದ್ದರೆ, ಈ ದೇಶಕ್ಕೆ ಒಳ್ಳೆಯ ಭವಿಷ್ಯವಿಲ್ಲವೆಂದು ಪುನಃ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದಂಥ ಶ್ರೀಮಾನ್ ಶಾಮಣ್ಣನವರು ತಂದಿರತಕ್ಕಂಥ ಖಾಸಗೀ ನಿರ್ಣಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇವೊತ್ತು ಈ ಲಂಚದ ಬಗ್ಗೆ ದೊಡ್ಡ ದೊಡ್ಡ ವ್ಯಾಖ್ಯಾನಗಳಾಗುತ್ತಿವೆ. ಈ ಹಿಂದೆಯೂ ಸಹ ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ದೊಡ್ಡ ದೊಡ್ಡ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಆ ರೀತಿ ವ್ಯಾಖ್ಯಾನ ಮಾಡುವಾಗ ಲಂಚದ ಮೂಲಕ್ಕೇ ಹೋಗಿದ್ದಾರೆ. ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರು ಮಾತನಾಡುವಾಗ ಲಂಚದ ಪರಂಪರೆಯ ಬಗ್ಗೆ, ಲಂಚದ ಸಂಸ್ಕೃತಿಯ ಬಗ್ಗೆ ಹೇಳಿದ್ದಾರೆ. ದೇವರಿಗೆ ನೈವೇದ್ಯ ಕೊಡುವುದು ಸಹ ಒಂದು ರೀತಿಯ ಲಂಚವೇ ಎಂದು ಹೇಳಿದ್ದಾರೆ. ಆ ರೀತಿ ಅವರು ಹೇಳುತ್ತಾ ಯಜ್ಞ, ಯಾಗದ ಬಗೆ ಸಹ ಹೇಳಿದರು.

ಉಪಾಧ್ಯಕ್ಷರು.—ಜನರು ದೇವರಿಗೆ ನೈವೇದ್ಯ ಕೊಡುತ್ತಾರೆಂದು ಅವರು ಹೇಳಿದರೇ ಹೊರತು ದೇವರು ಅದನ್ನು ತಿನ್ನುತ್ತದೆಯೋ ಎಂಬುದನ್ನು ಹೇಳಲಿಲ್ಲ, ಜನರು ದೇವಸ್ಥಾನ ಕಟ್ಟಿಸುತ್ತಾರೆಂದು ಅವರು ಹೇಳಿದರೇ ಹೊರತು, ದೇವರು ಅಲ್ಲಿರುತ್ತದೆಯೋ ಎಂಬುದನ್ನು ಅವರು ಹೇಳಲಿಲ್ಲ, ಮತ್ತು ದೇವರನ್ನು ಯಾರು ಸೃಷ್ಟಿ ಮಾಡಿದರು ಎಂಬುದನ್ನು ಅವರು ಹೇಳಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ದೇವರನ್ನೇ ಮನುಷ್ಯ ಸೃಷ್ಟಿ ಮಾಡಿದ ಎಂಬುದು ಚಂದ್ರಗುಪ್ತ ಮತ್ತು ಚಾಣಕ್ಯನ ಕಾಲದ ಚರಿತ್ರೆಯಿಂದ ತಿಳಿದು ಬರುತ್ತದೆ. ಆ ಬಗ್ಗೆ ಈಗ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಇಂದು ರಾಷ್ಟ್ರದಲ್ಲಿ ಏನು ಪರಿಸ್ಥಿತಿ ಇದೆ ಎಂದರೆ, ಬಹಳ ಜನರು ಕೊಲೆ ಮಾಡುವುದನ್ನೇ ಅಭ್ಯಾಸ ಮಾಡಿಕೊಂಡರೆ, ಅದೇ ಒಂದು ದೊಡ್ಡ ಹವ್ಯಾಸವಾಗಿ ಬಿಟ್ಟರೆ, ಎಲ್ಲಿ ನೋಡಿದರೂ ಕೊಲೆಗಳೇ ಆಗುತ್ತಿರುತ್ತವೆ. ಆಗ ತಿಳಿದವರು ಈ ಹಿಂದೆಯೂ ಕೊಲೆಗಳಾಗುತ್ತಿರಲಿಲ್ಲವೇ ಎಂದು ವಾದ ಮಾಡಬಹುದು, ರೇಣುಕೆಯನ್ನು ಪರಶುರಾಮ ಕೊಂದಿರಲಿಲ್ಲವೇ ಅದರಲ್ಲಿ ತಪ್ಪೇನಿದೆ, ಎಂದು ಹೇಳುವಂತಹ ಜನರೂ ಸಹ ಇಂದು ಇದ್ದಾರೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ಹಿಂದೆ ಲಂಚದ ಬಗ್ಗೆ ಮಾತನಾಡುತ್ತಾ, ಇದೇನೂ ಹೊಸದಲ್ಲ, ಹಿಂದೆ ಕೂಡ ಇತ್ತು ಎಂಬ ಮಾತನ್ನು ಹೇಳಿದ್ದಾರೆ. ಅಂದರೆ ಹಿಂದೆ ನಮ್ಮ ತಂದೆ ಗಡ್ಡ ಬಿಟ್ಟಿದ್ದರು, ಬಟ್ಟೆ ಹಾಕಿಕೊಳ್ಳುತ್ತಿರಲಿಲ್ಲ. ಆದಕಾರಣ ನಾವೂ ಸಹ ಅದೇ ರೀತಿ ಇರಬೇಕು ಎಂಬುದನ್ನು ತಾತ್ವಿಕವಾಗಿ ಒಪ್ಪಿಕೊಂಡಂತೆ ಆಯಿತು. ಹಿಂದೆ ಇತ್ತು ಎಂಬ ಕಾರಣದಿಂದ ಅದು ಈಗಲೂ ಮುಂದುವರೆಯುವುದಕ್ಕೆ ಅವಕಾಶ ಕೊಡುವುದು ಸರಿಯೇ? ಲಂಚದ ಒಂದು ಸಿದ್ಧಾಂತವನ್ನು ಸೃಷ್ಟಿ ಮಾಡುವುದು ಅಪಾಯಕಾರಿ ಎಂಬುದನ್ನು ನಾವುಗಳು ರಾಷ್ಟ್ರಕ್ಕೆ ಹಾಗೂ ರಾಜ್ಯಕ್ಕೆ ತೋರಿಸಿಕೊಡುತ್ತೇವೆ. ಲಂಚ ಎಂಬುದು ಇಂದು ಸರ್ವವ್ಯಾಪ್ತಿಯಾಗಿದೆ, ಅದು ಹಿಂದೆ ಕೂಡ ಇತ್ತು ಎಂದು ಹೇಳುತ್ತಾರೆ; ಮತ್ತು ಲಂಚ ಎಂಬುದು ಎಲ್ಲಿದೆ, ಅದನ್ನು ತೋರಿಸಿ ಎಂದು ಎಲ್ಲರೂ ಹೇಳುತ್ತಾರೆ, ಇಂತಹವರು ಮಾಡಿದ್ದಾರೆಂದು ನಾವು ದಾಖಲೆ ಸಹಿತವಾಗಿ ತೋರಿಸಿಕೊಟ್ಟರೂ ಸಹ, ಹಿಡಿದುಕೊಟ್ಟರೂ ಸಹ ಅಂತಹವರ ಬಗ್ಗೆ ಕ್ರಮ ಕೈಕೊಳ್ಳದೆ, ಅದು ನಿಜವಲ್ಲ ಎಂದು ಸಮರ್ಥನೆ ಮಾಡತಕ್ಕವರನ್ನು ನಾವು ಏನೆಂದು ಕರೆಯಬೇಕು, ಪ್ರಜಾಪ್ರಭುತ್ವದ ದೃಷ್ಟಿಯಿಂದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ, ಪ್ರಜಾಪ್ರಭುತ್ವದ ಅಡಿಯಲ್ಲಿ ಲಂಚ ಎಂಬುದು ಇರಬಾರದು ಎಂಬ ಕಾರಣದಿಂದ ನಾವು ಅದರ ವಿರುದ್ಧ ಪರಮಾವಧಿ ಹೋರಾಟ ಮಾಡಿದ್ದೇವೆ. ಇನ್ನು ಮುಂದೆಯೂ ಸಹ ಹೋರಾಟ ಮಾಡುತ್ತೇವೆ. ಲಂಚದ ಒಂದು ಸಿದ್ಧಾಂತವನ್ನು ಸೃಷ್ಟಿಮಾಡಿ ಅದಕ್ಕೆ ಈಗ ಒಂದು ಹೊಸ ಕವಚವನ್ನು ತೊಡಿಸಿ, ಈಗ ಅದನ್ನು ಸಂಪೂರ್ಣವಾಗಿ ನಿಷಿದ್ಧ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ಒಂದು ವಾದವನ್ನು ಏನು ಮಂಡನೆ ಮಾಡಿದ್ದಾರೆ ಅದಕ್ಕಿಂತ ಬೇರೆ ಭ್ರಷ್ಟಾಚಾರ ಇಲ್ಲ ಎಂದು ನಾನು ಹೇಳುತ್ತೇನೆ. ಈ ಲಂಚ ಮತ್ತು ಭ್ರಷ್ಟಾಚಾರವನ್ನು ತೊಡೆದುಹಾಕುವುದಕ್ಕೆ ನಿಮಗೆ ಶಕ್ತಿ ಇಲ್ಲ ಎನ್ನುವುದಾದರೆ, ಅಧಿಕಾರ ಗದ್ದುಗೆಯಿಂದ ಕೆಳಗೆ ಇಳಿಯಿರಿ ಎಂದು ನಾನು ಹೇಳುತ್ತೇನೆ. ರಾಜ್ಯಸರ್ಕಾರಕ್ಕೆ ಹಾಗೂ ರಾಷ್ಟ್ರ ಸರ್ಕಾರಕ್ಕೆ ಈ ಲಂಚ

ವನ್ನು ನಿರ್ಮೂಲ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂಬುದು ನಮಗೆ ಅರ್ಥವಾಗಿದೆ; ಅದೇ ಒಂದು ಖಚಿತವಾದ ಅಭಿಪ್ರಾಯಕ್ಕೆ ಈ ಸರ್ಕಾರಗಳು ಬಂದಿದ್ದರೆ ಅಂತಹ ಸರ್ಕಾರಗಳು ಅಧಿಕಾರ ಗದ್ದುಗೆಯಲ್ಲಿ ರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಇಂದು ಎಲ್ಲರೂ ಸಹ ತಾವು ಸತ್ಯಹರಿಶ್ಚಂದ್ರರು ಎಂದು ಹೇಳಿಕೊಳ್ಳುತ್ತಾರೆ. ಆದರೆ ತಪ್ಪು ಮಾಡಿದವರನ್ನು ಹಿಡಿದುಕೊಟ್ಟಾಗ, ಅದನ್ನು ಒಪ್ಪಿಕೊಳ್ಳುವುದಕೆ ಮಾತ್ರ ಯಾರೂ ಸಿದ್ಧವಾಗಿಲ್ಲ; ಇಂತಹ ಒಂದು ಪರಿಸ್ಥಿತಿ ಇವೊತ್ತು ಉಂಟಾಗಿದೆ. ಈ ಲಂಚಕ್ಕೆ ಮೂಲ ಕಾರಣವೇನು ಎಂಬುದನ್ನು ನಾವು ನೋಡಬೇಕಾಗಿದೆ. ಇದನ್ನು ಯಾರು ತೆಗೆದುಕೊಳ್ಳುತ್ತಾರೆ, ಏತಕ್ಕೆ ತೆಗೆದುಕೊಳ್ಳುತ್ತಾರೆ ಎಂಬುದನ್ನು ನಾವು ನೋಡಬೇಕಾಗಿದೆ. ಯಾರಿಗೆ ಅವಶ್ಯಕತೆ ಇದೆಯೋ ಅವರು ತೆಗೆದುಕೊಳ್ಳುತ್ತಾರೆ. ಬರತಕ್ಕಂಥ ವರಮಾನ ಸಾಲದೇ ಇದ್ದಾಗ ಇದಕ್ಕೆ ಆಸೆ ಪಡುತ್ತಾರೆ. ಇದನ್ನು ಹೋಗಲಾಡಿಸಲು ಇರತಕ್ಕಂಥ ಒಂದೇ ಮಾರ್ಗವೆಂದರೆ ದೇಶದಲ್ಲಿ ಸಮಾಜವಾದವನ್ನು ಜಾರಿಗೆ ತರುವುದು; ಎಲ್ಲರಿಗೂ ಸಮಾನವಾದ ಪ್ರಾತಿನಿಧ್ಯವಿರುವಂತೆ ಮಾಡುವುದು, ಈಗ ನಾವು ಶಿಕ್ಷಣ ಕ್ಷೇತ್ರವನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡರೆ, ಬಡವರ ಮಕ್ಕಳು ಗುಡಿಸಲುಗಳಲ್ಲಿ ನಡೆಯುವ ಶಾಲೆಗಳಿಗೆ ಶಿಕ್ಷಣ ಪಡೆಯಲು ಹೋಗುತ್ತವೆ; ಅದೇ ಶ್ರೀಮಂತರ ಮಕ್ಕಳು ಮತ್ತು ಮಂತ್ರಿಗಳ ಮಕ್ಕಳು ಎಂತಹ ಶಾಲೆಗಳಿಗೆ ಹೋಗುತ್ತಾರೆಂಬುದು ಎಲ್ಲರಿಗೂ ಗೊತ್ತಿದೆ; ಈ ತಾರತಮ್ಯ ಮೊದಲು ಹೋಗಬೇಕು. ಶ್ರೀಮಂತ ಮಕ್ಕಳು, ಐ.ಎ.ಎಸ್. ದರ್ಜೆಯ ಅಧಿಕಾರಿಗಳ ಮಕ್ಕಳು ಮತ್ತು ಜವಾನರ ಮಕ್ಕಳು ಒಂದೇ ಶಾಲೆಯಲ್ಲಿ ಓದುವುದಕ್ಕೆ ವ್ಯವಸ್ಥೆ ಮಾಡಬೇಕು. ಆ ರೀತಿ ವ್ಯವಸ್ಥೆ ಮಾಡದೇ ಹೋದರೆ ಈ ತಾರತಮ್ಯ ಮನೋಭಾವವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ಕೆಳಗಿರುವವರು ಮೇಲೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಿನ ಪರಿಸ್ಥಿತಿ ಏನಿದೆ ಎಂದರೆ, ಬಡವರ ಮಕ್ಕಳು ಈ ಸರ್ಕಾರೀ ಶಾಲಾ ಕಾಲೇಜುಗಳಲ್ಲಿ ಓದಿದರೆ, ದೊಡ್ಡವರ ಮಕ್ಕಳು, ಶ್ರೀಮಂತರ ಮಕ್ಕಳು, ಪ್ರಧಾನಮಂತ್ರಿಗಳ ಮಕ್ಕಳು ಕ್ರೇಂಬ್ರಿಡ್ಜ್‌ನಲ್ಲಿ, ಆಕ್ಸ್‌ಫಡ್‌ನಲ್ಲಿ ಓದುವುದಕ್ಕೆ ಹೋಗುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರೆದರೆ ಬಡವರು ಮತ್ತು ಸಾಮಾನ್ಯ ಜನರು ಏನಿದ್ದಾರೆ, ಅವರು ಏನು ಯೋಚನೆ ಮಾಡುತ್ತಾರೆ ಎಂಬುದನ್ನು ತಾವು ವಿಚಾರ ಮಾಡಿ ನೋಡಬೇಕು. ಈ ಭ್ರಷ್ಟಾಚಾರ ಏನಿದೆ, ಅದರ ತಾಯಿ ಬೇರು ದೆಹಲಿಯಲ್ಲಿದೆ. * * *

SRI S. M. KRISHNA.— Mr. Deputy Speaker, while regulating the debate you will have to give protection not only to members who are present here but also to those who are not present. The hon. member, true to his creed has been making certain derogatory references to the Prime Minister. I would like you to go through the records and see whether they any are objectionable.

4-30 P.M.

MR. DEPUTY SPEAKER.— The conventions and rules of procedure provide that derogatory remarks should not be made against persons who are not able to defend themselves here. Even if some defamatory or derogatory remarks against any person is to be made prior notice has to be given to the Chair. Anyway, I will get the extracts of the speech of the hon. Member and see what he has said is to be expunged or not.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಮಾನ್ಯ ಸದಸ್ಯರು ನಮ್ಮ ದೇಶದ ಪ್ರಧಾನ ಮಂತ್ರಿಗಳ ಮೇಲೆ ಆರೋಪಣೆ ಮಾಡಿದ್ದಾರೆಯೇ ಹೊರತು ವೈಯಕ್ತಿಕವಾಗಿ ಶ್ರೀಮತಿ ಇಂದಿರಾಗಾಂಧಿ ಅವರ ಮೇಲೆ ಆರೋಪಣೆ ಮಾಡಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.— ಶ್ರೀಮತಿ ಇಂದಿರಾಗಾಂಧಿಯವರು ಮಹಿಳೆಯರಾಗಿದ್ದಾರೆ. ಅವರ ಬಗ್ಗೆ ನನಗೆ ಗೌರವ ಇದೆ.

* * * expunged an ordered by the Chair

MR. DEPUTY SPEAKER.— Now-a-days our sense of proportion is so much confused that people become emotinal and surcharged and make certain sweeping remarks. Let us be reasonable.

ಶ್ರೀ ಕೋಣಂದೂರು ಲಿಂಗಪ್ಪ.— ತಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಯಾವ ರಾಷ್ಟ್ರದ ಆಡಳಿತ ಸೂತ್ರವನ್ನು ಹಿಡಿದಿರತಕ್ಕ ಪ್ರಧಾನ ಮಂತ್ರಿಗಳು ಇದ್ದಾರೆ, ಅವರ ಮಕ್ಕಳು ಈ ರಾಷ್ಟ್ರದ ಯಾವುದೇ ಶಾಲಾ ಕಾಲೇಜುಗಳಲ್ಲಿ ಓದದೆ ಪರದೇಶದಲ್ಲಿ ಓದಿದರು. ಇದು ತಾರತಮ್ಯವಲ್ಲವೇ?

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ.— ಮಾನ್ಯ ಸದಸ್ಯರು ಸಮಾಜವಾದದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆಯೋ?

ಶ್ರೀ ಕೋಣಂದೂರು ಲಿಂಗಪ್ಪ.—ಶ್ರೀಮಾನ್ ಚಂದ್ರಶೇಖರ್ ಅವರಿಗೆ ಸಮಾಜವಾದದ ಕಾಗುಣಿತ ಕೂಡ ಗೊತ್ತಿಲ್ಲ. ಅವರು ಶ್ರೀಮಂತರ ಮನೆಯಲ್ಲಿ ಹುಟ್ಟಿದವರು ಅವರಿಗೆ ಸಮಾಜವಾದ ಗೊತ್ತಿಲ್ಲ. ಅವರು ಹಿಂದಿನಿಂದಲೂ ಶ್ರೀಮಂತರಾಗಿದ್ದಾರೆ. ಅವರು ನನಗೆ ಸಮಾಜವಾದ ಬಗ್ಗೆ ಉಪನ್ಯಾಸ ಮಾಡುವುದಕ್ಕೆ ಬರುವುದಾದರೆ, ಅದಕ್ಕಿಂತ ದೊಡ್ಡ ದುರಂತ ಅವರ ಪಾಲಿಗೆ ಬೇರೆ ಯಾವುದೂ ಇಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಸಮಾನತೆ ಇರಬೇಕು ವಸತಿ ವಿಷಯದಲ್ಲಿ ಸಮಾನತೆ ಇರಬೇಕು. ಸಂಚಾರ ವಿಷಯದಲ್ಲಿ ಸಮಾನತೆ ಇರಬೇಕು. ಈಗ ಕೆಲವರು ಕಾರುಗಳನ್ನು ಇಟ್ಟುಕೊಂಡಿದ್ದಾರೆ. ಕೆಲವರು ಸ್ಕೂಟರುಗಳನ್ನು ಇಟ್ಟುಕೊಂಡಿದ್ದಾರೆ. ನಾನು ಒಂದು ಸ್ಕೂಟರ್ ಇಟ್ಟುಕೊಂಡಿದ್ದೇನೆ. ಇಲ್ಲ ಎಂದು ಹೇಳುವುದಿಲ್ಲ.

SRI D. B. KAIMANKAR.— Do you mean to say that the society as a whole is corrupt and so long as it exists the corruption will be there in one form or the other ? You suggest remedies to overcome this.

ಶ್ರೀ ಕೋಣಂದೂರು ಲಿಂಗಪ್ಪ.— ಸಮಾಜದಲ್ಲಿ ಅಂತರ ಅಪಾರವಾಗಿ ಎಲ್ಲಿ ಇರುತ್ತದೆ ಅದನ್ನು ನಾನು ಹೇಳುತ್ತೇನೆ.

SRI D. B. KAIMANKAR.—I am mentioning this to the hon.Member because he is a confirmed socialist.

SRI S. M. KRISHNA.— He is not only a confirmed socialist but also a condemmed socialist.

ಶ್ರೀ ಕೋಣಂದೂರು ಲಿಂಗಪ್ಪ.— ಕಂಡೆಮ್ಡ್ ಸೋಷಿಯಲಿಸ್ಟ್ ಮುಂದೆ ಹೋದವರು ಯಾರು ನೋಡಿ? ಈ ಕಡೆಯಿಂದ ಹೋಗಿ ಆ ಕಡೆ ಕುಳಿತುಕೊಂಡಿರುವವರು ಯಾರು ನೋಡಿ? ಎಲ್ಲಿಯವರೆಗೆ ಅಂತರ ಮತ್ತು ವರ್ಗ ಯಾವ ಸಮಾಜದಲ್ಲಿ ಇರುತ್ತದೆಯೋ ಅಲ್ಲಿಯವರೆಗೂ ಭ್ರಷ್ಟಾಚಾರ ಇರುತ್ತದೆ. ಸಮಾನತೆಯ ಸಮಾಜವಾದವನ್ನು ಪ್ರಾಮಾಣಿಕವಾಗಿ ನಿಷ್ಠೆಯಿಂದ ತರುವವರೆಗೂ ಯಾರೇ ಆಗಲಿ ಭ್ರಷ್ಟಾಚಾರದ ಬಗ್ಗೆ ಎಷ್ಟು ಹೇಳಿದರೂ ಅಷ್ಟೆ. ಮಾತಿನಲ್ಲಿ ಒಂದು ಹೇಳುವುದು ಕೃತಿಯಲ್ಲಿ ಮತ್ತೊಂದು ಮಾಡುವುದು ಸರಿಯಲ್ಲ. ಮಾತು ಮತ್ತು ಕೃತಿ ಎರಡೂ ಒಂದೇ ಆಗಿರಬೇಕು.

ಶ್ರೀ ಡಿ. ಬಿ. ಕಲಮಂಕರ್.— ಲಂಚವನ್ನು ಹೋಗಲಾಡಿಸುವುದಕ್ಕೆ ಪರಿಹಾರವನ್ನು ಸೂಚನೆ ಮಾಡಿ.

ಶ್ರೀ ಬಿ. ಪುಟ್ಟಸ್ವಾಮಯ್ಯ — ಅಧ್ಯಕ್ಷರೇ ಆಡಳಿತ ಪಕ್ಷದಲ್ಲಿ ಲಂಚಗುಳಿತನವನ್ನು ನಿರ್ಮೂಲನ ಮಾಡಿ ಅದನ್ನು ಪಾತಾಳಕ್ಕೆ ತುಳಿಯುವುದಕ್ಕೆ ನಾಯಕರಾದ ಶ್ರೀಮಾನ್ ದೇವರಾಜಅರಸ್ ಅವರು ಶ್ರೀಮಾನ್ ಬಸವಲಿಂಗಪ್ಪನವರನು ಕಿತ್ತು ಹಾಕಿ ಅವರ ಜಾಗದಲ್ಲಿ ಶ್ರೀಮಾನ್ ರಾಚಯ್ಯನವರನ್ನು ತಂದಿದ್ದಾರೆ. * * *

MR. DEPUTY SPEAKER.— If the hon. Member Sri Puttaswamaiah were to make such remarks I shall not allow him. Whatever is said should be reasonable. I will examine the records and see what the member has said is to be expunged or not.

*** Expunged as ordered by the Chair.

ಶ್ರೀ ಕೋಣಂದೂರು ಲಿಂಗಪ್ಪ.— ಆದ್ದರಿಂದ ಮಾನ್ಯ ಅಧ್ಯಕ್ಷರೇ ಯಾವ ಸರ್ಕಾರವೇ ಆಗಲೀ ಎಲ್ಲಿಯವರೆಗೆ ಸಮಾಜದಲ್ಲಿ ಅಂತರ ಅಪಾರವಾಗಿ ಇರುತ್ತದೆಯೋ ಅಲ್ಲಿಯವರೆಗೆ ಭ್ರಷ್ಟಾಚಾರ ಇದ್ದೇ ಇರುತ್ತದೆ. ಆದ್ದರಿಂದ ಈಗ ಈ ಅಂತರವನ್ನು ಕಡಿಮೆ ಮಾಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ, ಸಮಾಜವಾದವನ್ನು ಸಂಪೂರ್ಣವಾಗಿ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಬೇಕು ಎಂದು ಹೇಳತಕ್ಕವರು ಅಧಿಕಾರಕ್ಕೆ ಬಂದಿದ್ದಾರೆ. ಆದ್ದರಿಂದ ಈಗ ಸಮಾನತೆ ಎಂದರೆ ಉದಾಹರಣೆಗೆ ಸಂಚಾರದ ಬಗ್ಗೆ ಕೆಲವರು ದೊಡ್ಡ ದೊಡ್ಡ ಕಾರುಗಳಲ್ಲಿ ಓಡಾಡುತ್ತಾರೆ. ಕೆಲವರು ಬಸ್ಸುಗಳಲ್ಲಿ ತಿರುಗಾಡುತ್ತಾರೆ. ಕೆಲವರು ಇನ್ನೂ ಬೇರೆ ಬೇರೆ ವಾಹನಗಳಲ್ಲಿ ತಿರುಗಾಡುತ್ತಿರುತ್ತಾರೆ. ಇದರಲ್ಲಿ ಸಮಾನತೆ ತರಬೇಕಾದರೆ ಮಾರುತಿ ಕಾರು ಬೇಕಾಗಿಲ್ಲ. ಆದ್ದರಿಂದ ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸಮಾನತೆಯನ್ನು ತರಬೇಕು. ಅದಕ್ಕೋಸ್ಕರ ಈ ರೀತಿ ಸಮಾನತೆಯನ್ನು ತರುವಾಗ ಮುಸುಕನ್ನು ಹಾಕಿಕೊಂಡು ಯಾರ್ಯಾರು ಭ್ರಷ್ಟಾಚಾರದಲ್ಲಿ ತದ್ರೂಪರಾಗಿದ್ದಾರೋ ಅಂತಹವರನ್ನು ಹಿಡಿಯಬೇಕು. ಈ ಸದನದಲ್ಲಿ ಮತ್ತು ಹೊರಗಡೆ ತಾವೇ ಸತ್ಯ ಹರಿಶ್ಚಂದ್ರರು, ನಮ್ಮನ್ನು ಮೀರಿಸುವವರು ಯಾರೂ ಇಲ್ಲ, ಯಾರು ಬೇಕಾದರೂ ವಿಚಾರಣೆ ಮಾಡಲಿ ಎಂದು ಹೇಳುವವರು ಇದ್ದಾರೆ. ಅಂತಹವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ಸದನದಲ್ಲಿಯೇ ಬಹಳ ಜವಾಬ್ದಾರಿಯುತವಾಗಿ ಹಿಂದೆ ಅನೇಕ ಪ್ರಕರಣಗಳಲ್ಲಿ ಭ್ರಷ್ಟಾಚಾರದ ಆರೋಪಣೆಗಳನ್ನು ಮಾಡಿದ್ದೆವು ಒಂದುಸಾರಿ ಮಾನ್ಯ ಶ್ರೀ ದೇವೇಗೌಡರು ಅವು ರುಜುವಾತು ಆದರೆ ನಾನೇ ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದಾರೆ. ಈ ಆಡಳಿತ ಪಕ್ಷದ ನನ್ನ ಮಿತ್ರರು ಅವರ ಬಗ್ಗೆ ಇವರ ಬಗ್ಗೆ ಹೇಳುವುದರ ಬದಲು ನಮ್ಮನ್ನು ನಾವೇ ತಿಳಿದುಕೊಂಡರೆ ಸಾಕು. ಲೋಕಮಾನ್ಯ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಆರೋಪಣೆ ಹೊರಿಸುವುದರ ಬಗ್ಗೆ ಯಾರೇ ಆಗಲಿ ಅವರ ಸುತ್ತಮುತ್ತಲಿರುವ ಅನುಭವಿಗಳು ಯಾರೇ ಇರಲಿ ಅದನ್ನು ಒಪ್ಪುವುದಿಲ್ಲ. ಅವರ ವಿಷಯ ಏನೆಂಬುದನ್ನು ನಾವು ಹೇಳಬೇಕಾಗಿದೆ. ಭ್ರಷ್ಟಾಚಾರ ಇವತ್ತು ಒಂದು ದೊಡ್ಡ ವ್ಯಾಧಿಯಾಗಿದೆ. ಇನ್ನೊಂದು ಮಾತನ್ನು ಹೇಳುವುದಾದರೆ ಈ ರಾಷ್ಟ್ರದಲ್ಲಿ ಭ್ರಷ್ಟಾಚಾರವನ್ನು ಭಟ್ಟಿ ಇಳಿಸಿ ಅದಕ್ಕೆ ಒಂದು ಹೆಸರು ಕೊಡಬೇಕಾದರೆ ಅದಕ್ಕೆ ಆಡಳಿತ ಕಾಂಗ್ರೆಸ್ ಅಥವಾ ಒಟ್ಟಿನಲ್ಲಿ ಕಾಂಗ್ರೆಸ್ ಎಂಬುದಾಗಿ ಹೇಳಬಹುದು. ಆಸೇತು ಹಿಮಾಚಲ ಪರ್ಯಂತ ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಈಗ ಒಂದು ಚಳುವಳಿಯನ್ನು ಆರಂಭ ಮಾಡಿದ್ದಾರೆ. ಹಿಂದೆ ಮಹಾತ್ಮ ಗಾಂಧಿಯವರೂ ಸಹ ಇಂಡಿಯಾದೇಶದಲ್ಲಿ ಈ ಒಂದು ಭ್ರಷ್ಟಾಚಾರವನ್ನು ನಿರ್ಮೂಲಮಾಡುವುದಕ್ಕಾಗಿ ಒಂದು ಚಳುವಳಿಯನ್ನು ಮಾಡಿದ್ದರು.

MR DEPUTY SPEAKER.— The hon. Member should have a little sympathy for me by being wit in the scope of the Resolution. He seems to be so much imaginative that it cannot be permitted.

ಶ್ರೀ ಕೋಣಂದೂರು ಲಿಂಗಪ್ಪ.— ನ್ಯಾಯಾಂಗ ಆಯೋಗವನ್ನು ಅದರಲ್ಲಿಯೂ ಜನತಾ ನ್ಯಾಯಾಂಗದ ಆಯೋಗವನ್ನು ನೇಮಕಮಾಡಬೇಕೆಂದು ನಾನು ಹೇಳುತ್ತೇನೆ.

MR DEPUTY SPEAKER.— The hon. Member is a lawyer and I am proud that he is a lawyer. He must argue in defence of this Resolution if at all he believes. If he does not believe, he must repudiate it in an argumentative manner.

ಶ್ರೀ ಕೋಣಂದೂರು ಲಿಂಗಪ್ಪ.— ಈ ರಾಜ್ಯದಲ್ಲಿ ನಾನು ಒಂದು ಮಾತನ್ನು ಹೇಳುವುದಾದರೆ ಸರ್ಕಾರದಲ್ಲಿ ಈ ಸದನ ರಾಷ್ಟ್ರದ ಒಂದು ಅಂಗ. ಈ ರಾಷ್ಟ್ರದ ಸಮಗ್ರತೆಯನ್ನು ಕಾಪಾಡಲು ಬಹಳ ಶ್ರಮ ಪಡಬೇಕಾಗುತ್ತದೆ ಇಂತಹ ಒಂದು ಸಮಗ್ರ ರಾಷ್ಟ್ರದಲ್ಲಿ ನಾವೂ ಸಹ ಒಂದು ಅಂಗ ಆಗಿರುವುದರಿಂದ ಈ ರಾಷ್ಟ್ರದಲ್ಲಿ ಅದರಲ್ಲಿಯೂ ಸಾಮಾಜಿಕ ಕ್ಷೇತ್ರದಲ್ಲಿ ಅನ್ಯಾಯ ಆಗದಂತೆ ನೋಡಿಕೊಳ್ಳಲು ಎಲ್ಲಾ ವಿಧಗಳನ್ನೂ ಅನುಸರಿಸಬೇಕಾಗುತ್ತದೆ. ಭ್ರಷ್ಟಾಚಾರದ ಬಗ್ಗೆ ಒಂದು ಮಾತು. ಸಮಗ್ರ ಕ್ರಾಂತಿಯಾಗಬೇಕು. ಅದು ಈಗ ಬರುತ್ತಾ ಇದೆ. ಅದರ ಬಗ್ಗೆ ಈಗ ಸಂಪೂರ್ಣವಾದಂಥ ಗಾಳಿ ಬೀಸುತಿದೆ. ಈ ರಾಜ್ಯದಲ್ಲಿರತಕ್ಕ ಭ್ರಷ್ಟಾಚಾರವನ್ನು ಹಾಗೂ ದುಷ್ಟರನ್ನೂ ಮೊದಲು ಹೋಗಲಾಡಿಸಬೇಕು. ಏಕೆಂದರೆ ಇದರಿಂದ ಅನೇಕ ಕಷ್ಟಗಳನ್ನು ಜನ ಅನುಭವಿಸುತ್ತಿದ್ದಾರೆ. ದೇಶದಲ್ಲಿ ಈ ಭ್ರಷ್ಟಾಚಾರ ಅವರಿಕೊಂಡು ಬಿಟ್ಟಿದೆ. ಅವರು ಯಾರೇ ಇರಲಿ, ನಿಮ್ಮವರೇ ಇರಲಿ, ಅವರೆಲ್ಲರಿಗೂ ಅಗ್ನಿಪರೀಕ್ಷೆ ಆಗಬೇಕು. ಅದಕ್ಕಾಗಿ ಒಂದು ನ್ಯಾಯಾಂಗ ಸಮಿತಿ ನೇಮಕಮಾಡಬೇಕು ಅಂತಹ ಸಮಿತಿಯಲ್ಲಿ ಎಲ್ಲರೂ ಕೂಡ ತಮ್ಮ ತಮ್ಮ ಮನವಿಗಳನ್ನು ಮಾಡಿಕೊಂಡು ತಮ್ಮ ತಮ್ಮ ಬೇಡಿಕೆಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು

ಅದನ್ನು ಮಾಡದೆ ಈ ಸದನದಲ್ಲಿ ಅಥವಾ ಹೊರಗಡೆ ಎಷ್ಟೇ ಭ್ರಷ್ಟಾಚಾರದ ಆಪಾದನೆಗಳನ್ನು ಇಟ್ಟರೂ ಅದು ರಂಜನೆ ಮಾತು ಆಗುವುದಿಲ್ಲ. ಪ್ರಜಾಪ್ರಭುತ್ವ ಪದ್ಧತಿ ಪ್ರಕಾರ ಎಷ್ಟು ಹೇಳಿದರೂ ಬಹುಮತ ಇರತಕ್ಕವರು ಇದರ ಬಗ್ಗೆ ಏನು ಮಾಡುವುದಕ್ಕೆ ಸಾಧ್ಯವಿದೆಯೆಂದು ಹೇಳುತ್ತಾರೆ. ಇದರ ಬಗ್ಗೆ ಸದನದ ತೀರ್ಮಾನಕ್ಕೆ ಎಲ್ಲರೂ ಬೆಲೆ ಕೊಡಬೇಕೆಂದೂ ಆದರಿಂದ ಒಂದು ನ್ಯಾಯಾಂಗ ಆಯೋಗವನ್ನು ರಚನೆಮಾಡ ಬೇಕೆಂದು ನಾನು ಕೇಳಿಕೊಂಡು ಕೊನೆಯಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಕರ್ನಾಟಕದ ಜನರು ಬಹಳ ಸಭ್ಯತೆಯುಳ್ಳ ಜನರು. ಅಂತಹವರ ನಡುವೆ ಇದೇ ಮೇ ೧೪, ೧೫, ೧೬ ಮತ್ತು ೧೭ ರಂದು ಅಂದರೆ ನಾಲ್ಕು ದಿನಗಳ ಕಾಲ ಒಂದು ಹೊಸ ವಾತಾವರಣ, ಒಂದು ಹೊಸ ಶಕ್ತಿ ಸಂಚಾರ ಆಗುತ್ತಿದೆ. ಅಂದರೆ ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಇಲ್ಲಿಗೆ ಬರುತ್ತಾರೆ. ಇದಕ್ಕಾಗಿ ಸರ್ಕಾರದವರು ಅವರು ಮಾಡಬೇಕಾದ ಕರ್ತವ್ಯವನ್ನು ಸಮಾಧಾನದಿಂದ ಮಾಡಬೇಕಾಗುತ್ತದೆ. ಅವರು ಬಂದುಹೋದ ಮೇಲೆ ಇವರಿಗೆ ಸರಿಯಾದ ಬುದ್ಧಿ ಬರುತ್ತದೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ತಂದಿರತಕ್ಕ ಈ ನಿರ್ಣಯವನ್ನು ನಾನು ವಿರೋಧಿಸಿ ಕೆಲವು ಮಾತುಗಳನ್ನು ಆಡಬೇಕೆಂದು ಬಯಸಿದ್ದೇನೆ. ನಾನು ಈ ರೀತಿ ವಿರೋಧಮಾಡಿದ ತಕ್ಷಣ ನಾನು ಲಂಚವನ್ನು ನಿರ್ಮೂಲ ಮಾಡಬಾರದೆಂದು ಹೇಳುವವನಲ್ಲ. ಈ ನಿರ್ಣಯ ತಂದಿರುವುದು ಸರಿಯಲ್ಲ. ಏಕೆಂದರೆ ಅವರು ಏನು ಹೇಳುತ್ತಾರೆ ? ದಕ್ಷತೆ ಹೆಚ್ಚಿಸಿಕೊಳ್ಳಬೇಕೆಂಬ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ನ್ಯಾಯಾಂಗದ ಆಯೋಗವನ್ನು ನೇಮಿಸಬೇಕೆಂದೂ, ಈ ಸಭೆಯವರು ಸರ್ಕಾರದವರಿಗೆ ಸೂಕ್ತ ಶಿಫಾರಸುಗಳನ್ನು ಮಾಡಬೇಕೆಂದೂ ಹೇಳುತ್ತಾರೆ. ಅದು ಬೇಕಿಲ್ಲ. ಇದೇ ಅಸೆಂಬ್ಲಿಯಲ್ಲಿ ಲೋಕಪಾಲ ಹಾಗೂ ಲೋಕಯುಕ್ತ ಬಿಲ್ ಚರ್ಚೆಯಾಗಿದೆ, ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೂ ಹೋಗಿದೆ. ಲಂಚವನ್ನೂ ತೆಗೆದುಹಾಕಿ ದಕ್ಷತೆಯನ್ನು ಹೆಚ್ಚಿಸಲು ಸರ್ಕಾರದವರು ಸಾಧ್ಯವಾದಷ್ಟು ಅದರಲ್ಲಿ ಪೂರ್ಣ ತಿದ್ದುಪಡಿಗಳನ್ನು ತಂದಿರುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಅದರಲ್ಲಿ ಯಾವ ರೀತಿಯಲ್ಲಿ ಮಾಡ ಬೇಕು, ಡ್ರಾಫ್ಟ್ ಯಾವ ರೀತಿ ಇರಬೇಕು, ಬಿಲ್ ಯಾವ ರೀತಿಯಲ್ಲಿ ತಿದ್ದುಪಡಿ ಆಗಬೇಕು, ಲಂಚವನ್ನು ಯಾವ ರೀತಿಯಲ್ಲಿ ನಿರ್ಮೂಲ ಮಾಡುವುದಕ್ಕೆ ನಾವು ಪ್ರಯತ್ನಮಾಡಬೇಕೆಂಬ ಬಗ್ಗೆ ಸಲಹೆಗಳನ್ನು ಅಲ್ಲಿ ಕೊಡಬಹುದು. ಅಲ್ಲದೆ ನಮ್ಮ ಸರ್ಕಾರದಲ್ಲಿ ವಿಜಿಲೆನ್ಸ್ ಕಮಿಷನ್ ಒಂದು ಇದೆ. ಅವರೂ ಸಹ ಈಗಾಗಲೇ ಅನೇಕ ಕೇಸುಗಳನ್ನು ಪತ್ತೆಹಚ್ಚಿದ್ದಾರೆ. ಅವರೂ ಸಹ ಅವರ ಕೆಲಸಗಳನ್ನು ಮಾಡುತ್ತಿದ್ದಾರೆ. ಮಾನ್ಯ ವಿರೋಧಪಕ್ಷದ ಕೆಲವು ಸದಸ್ಯರು ಮಂತ್ರಿಗಳ ಮೇಲೂ ಲಂಚದ ಆಪಾದನೆಗಳು ಎಷ್ಟೋ ಇವೆಯೆಂದು ಹೇಳಿದರು. ಕೇಂದ್ರ ಸರ್ಕಾರದವರೂ ಕೂಡ ಇಂತಹ ಲಂಚಗಳನ್ನು ನಿರ್ಮೂಲ ಮಾಡುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅಲ್ಲಿ ಅಂತಹವರು ಎಷ್ಟೇ ದೊಡ್ಡವರಾಗಿ ಇರಲಿ, ಆ ವ್ಯಕ್ತಿ ಎಂತಹ ಪ್ರತಿಭಾವಂತನಾಗಿರಲಿ, ಎಂತಹ ಪ್ರತಿಷ್ಠಾ ಜಾಗದಲ್ಲಿ ಕೆಲಸಮಾಡಿರಲಿ, ಅಂತಹವರನ್ನೂ ಸಹ ಅವರು ಬಿಟ್ಟಿಲ್ಲ. ಉದಾಹರಣೆಗೆ ಹೇಳುವುದಾದರೆ, ಕಾಶ್ಮೀರದ ಶ್ರೀ ಭಕ್ಷಿಗುಲಾಮ್ ಮಹಮದ್, ಶ್ರೀ ಪ್ರತಾಪಸಿಂಗ್ ಕೈರಾನ್ ಮತ್ತು ಶ್ರೀ ಹರೇ ಕೃಷ್ಣ ಮೆಹತಾಬ್–ಮುಂತಾದವರ ಬಗ್ಗೆ ವಿಚಾರಣೆಯಾಗಿ ಯಾವ ರೀತಿ ಅವರಿಂದ ಭ್ರಷ್ಟಾಚಾರವಾಗಿದೆಯೆಂಬುದನ್ನು ಅವರು ತಿಳಿಸಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರದವರು ಅವರು ಯಾರೇ ಆಗಿರಲಿ ಅವರನ್ನು ಮುಚ್ಚಿಟ್ಟುಕೊಳ್ಳುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅದು ಗೊತ್ತಾದಮೇಲೆ ವಿಚಾರಣೆ ಮಾಡುವುದನ್ನೇ ಬಿಟ್ಟರು.

ಶ್ರೀ ಕೆ. ಎಂ. ರುದ್ರಪ್ಪ.—ಕೇಂದ್ರ ಸರ್ಕಾರದವರು ದಕ್ಷತೆಯಿಂದ ವಿಚಾರಣೆ ಮಾಡುತ್ತಾರೆ. ಅಂತಹ ವ್ಯಕ್ತಿಗಳು ಎಷ್ಟೇ ಪ್ರಭಾವಶಾಲಿಗಳಾಗಿರಲಿ ಅಂತಹವರನ್ನೂ ಸಹ ಈಗ ಬಿಡಲಿಲ್ಲ. ಇಂತಹ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವುದಕ್ಕೆ ಸತತವಾದ ಪ್ರಯತ್ನಗಳಲಿ ಕೇಂದ್ರ ಸರ್ಕಾರದವರಿಂದ ನಡೆಯುತ್ತಿವೆ. ರಾಜ್ಯ ಸರ್ಕಾರದವರಿಂದಲೂ ನಡೆಯುತ್ತಿವೆ. ಲಂಚ ಇಲ್ಲವೇ ಇಲ್ಲವೆಂದು ನಾನು ಹೇಳುವುದಿಲ್ಲ. ಲಂಚಕ್ಕೆ ಕೆಲವು ಸಂದರ್ಭಗಳಲ್ಲಿ ಸಾರ್ವಜನಿಕರೇ ಕಾರಣವೆಂಬುದನ್ನು ನಾವು ಮರೆಯು ಬಾರದು. ಮಾನ್ಯ ಶ್ರೀ ಶಾಮಣ್ಣನವರು ಮಾತನಾಡುತ್ತಾ ಜನಗಳ ನೈತಿಕಮಟ್ಟ ಜಾಸ್ತಿಯಾದರೆ, ನಿಜವಾಗಿಯೂ ಲಂಚ ಕಡಿಮೆಯಾಗುತ್ತದೆಂದು ಹೇಳಿದರು. ಆದರಿಂದಲೇ ಸರ್ಕಾರದವರು ಜನಗಳ ನೈತಿಕಮಟ್ಟವನ್ನು ಹೆಚ್ಚುಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಲಂಚ ಯಾರು ತೆಗೆದುಕೊಳ್ಳು ತ್ತಾರೋ ಅವರನ್ನು ಬಲಿ ಹಾಕಬೇಕು. ಲಂಚ ಯಾರು ಕೊಡುತ್ತಾರೋ ಅವರನ್ನೂ ಸಹ ಉಗ್ರ ಶಿಕ್ಷೆಗೊಳಪಡಿಸಬೇಕೆಂದು ನಾನು ಹೇಳುತ್ತೇನೆ. ಆಗ ಲಂಚ ನಿಜವಾಗಿಯೂ ಬಹಳ ಕಡಿಮೆಯಾಗುತ್ತದೆ ಎಂಬುದಾಗಿ ನಾನು ಭಾವನೆಮಾಡುತ್ತೇನೆ.

ಮುಖ್ಯವಾಗಿ ಜನಜೀವನದಲ್ಲಿ ಸುಖ, ಶಾಂತಿ ನೆಮ್ಮದಿ ಸಿಕ್ಕಿದರೆ ಈ ಲಂಚ ಎನ್ನುವುದು ಏನು ಇದೆ ಅದು ಕಡಿಮೆಯಾಗುತ್ತದೆ. ಅದು ಎಲ್ಲಿ ಇರುವುದಿಲ್ಲ ಅಲ್ಲಿ ಜಾಸ್ತಿಯಾಗುತ್ತದೆ. ಭ್ರಷ್ಟಾಚಾರಿಗಳು ಜಾಸ್ತಿಯಾಗುತ್ತಾರೆ ಆದುದರಿಂದ ಬ್ರಷ್ಟಾಚಾರ ಅಧಿಕಾರಿಗಳು ಮತ್ತು ಸಾರ್ವಜನಿಕ ಮುಖಂಡರು ಯಾರೇ ಆಗಿರಲಿ ತಪ್ಪನ್ನು ಮಾಡಿದರೆ ಅವರಿಗೆ ಉಗ್ರ ಶಿಕ್ಷೆ ಆಗಲೇಬೇಕು. ಆದ್ದರಿಂದ ನಮ್ಮ ಸರ್ಕಾರದವರು ಕೂಡ ಅದಕ್ಕೋಸ್ಕರ ಲೋಕಪಾಲ್ ಮತ್ತು ಲೋಕ ಆಯುಕ್ತ ಎಂದು ಒಂದು ಮಸೂದೆಯನ್ನು ತಂದಿದ್ದಾರೆ. ಅದರಲ್ಲಿ ಯಾರೂ ತಪ್ಪಿಸಿಕೊಳ್ಳದ ರೀತಿಯಲ್ಲಿ ಮಾಡುವ ಒಂದು ಮಹದಾಕಾಂಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಅದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಯಾವಾಗ ಸರ್ಕಾರದವರು ಆ ಉದ್ದೇಶವನ್ನು ಇಟ್ಟುಕೊಂಡಿರುವಾಗ, ಇನ್ನೊಂದು ನ್ಯಾಯಾಂಗ ಆಯೋಗವನ್ನು ನೇಮಕಮಾಡುವುದು ಬೇಕಾಗಿಲ್ಲವೆಂದು ನನ್ನ ಅಭಿಪ್ರಾಯ. ಲಂಚ ಇದೆ, ಅದನ್ನು ನಿರ್ಮೂಲನ ಮಾಡಬೇಕೆಂದು ಹೇಳುತ್ತೇನೆ. ಇದು ಕೇಂದ್ರಸರ್ಕಾರಕ್ಕೂ ಗೊತ್ತಿದೆ. ಅದಕ್ಕೋಸ್ಕರ ಒಂದು ಆಯೋಗ ಮಾಡಬೇಕೆಂದು ಹೇಳುವುದು ಸರಿಯಲ್ಲವೆನ್ನುವುದೇ ನನ್ನ ವಾದ. ಕೆಲವು ಸಮಯದಲ್ಲಿ ಉತ್ಪ್ರೇಕ್ಷೆಗೆ ಜನರು ಹೇಳುತ್ತಾರೆ. ಪಿ.ಎಸ್.ಸಿ.ಯಲ್ಲಿ ಸದಸ್ಯರ ಬಗ್ಗೆ ಕೆಲವು ಒಡಕು ಶಬ್ದಗಳು ಕೇಳಿಬರುತ್ತಿವೆ. ನಾನು ಅದಕ್ಕೆ ಒಂದು ಉದಾಹರಣೆ ಕೊಡ ಬಯಸುತ್ತೇನೆ. ಒಂದು ಸಾರಿ ೧೧ ಜನರು ಸೆಲೆಕ್ಷನ್‌ಗೆ ಹೋದಾಗ ಅದರಲ್ಲಿ ಇಬ್ಬರಿಗೆ ಅಪಾಯಿಂಟ್‌ಮೆಂಟ್ ಸಿಕ್ಕುವುದಿಲ್ಲ ಆದ್ದರಿಂದ ಅವರು ಏನು ಮಾಡುತ್ತಾರೆಂದರೆ ಬೇರೆಯವರ ಹತ್ತಿರ ಲಂಚ ತೆಗೆದುಕೊಂಡು ಅವರಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ ನಮಗೆ ಕೊಡಲಿಲ್ಲವೆಂದು ಅಪಪ್ರಚಾರ ಮಾಡುತ್ತಾರೆ. ಇದು ಕೇವಲ ಊಹಾಪೋಹ ಎಂದು ಹೇಳುತ್ತೇನೆ. ಅನೇಕ ಸಂದರ್ಭದಲ್ಲಿ ಊಹಾಪೋಹದಿಂದ ಕೂಡಿರುತ್ತದೆ ಯಾವುದಾದರೂ ಒಂದು ಅಪಾದನೆಮಾಡಿದರೆ, ಅದು ಗುರುತರವಾದುದ್ದರಿಂದ ಅದನ್ನು ರುಜುವಾತು ಮಾಡುವುದಕ್ಕೆ ಯಾರೂ ತಯಾರಿರುವುದಿಲ್ಲ. ಕೆಲವರು ವಿಜಿಲೆನ್ಸ್‌ಗೆ ಕಮಿಷನ್ ಅರ್ಜಿ ಕೊಡುತ್ತಾರೆ ; ಕೊಟ್ಟರೂ ಅದನ್ನು ರುಜುವಾತು ಮಾಡುವುದಕ್ಕೆ ಜನರು ಮುಂದೆ ಬರುವುದಿಲ್ಲ. ಮುಂದೆ ಬಂದರೆ ಸಾರ್ವಜನಿಕರು ಆಗ ಲಂಚವನ್ನು ನಿರ್ಮೂಲ ಮಾಡುವುದಕ್ಕೆ ಸಹಾಯಕವಾಗುತ್ತದೆ. ಇದು ನನ್ನ ಭಾವನೆ. ಈ ಲಂಚ ಏನು ಇದೆ ಇದು ನಮ್ಮ ಭಾರತದಲ್ಲಿ ಅಲ್ಲ ಪಾಶ್ಚಿಮಾತ್ಯ ದೇಶಗಳಲ್ಲೂ ಇದೆ ಇದರಿಂದ ಸರ್ಕಾರ ಪ್ರಯೋಜನವಿಲ್ಲವೆಂದು ಹೇಳುವುದು ಸರಿಯಲ್ಲ. ನಮ್ಮ ಸರ್ಕಾರ ಇದನ್ನು ಹೋಗಲಾಡಿಸಬೇಕೆಂದು ಬದ್ಧ ಕಂಕಣ ತೊಟ್ಟಿದೆಯೆಂದು ಹೇಳಿದರೂ ತಪ್ಪಾಗುವುದಿಲ್ಲ. ನಮ್ಮ ರಾಜ್ಯಸರ್ಕಾರದಲ್ಲಿ ಶ್ರೀಮಾನ್ ದೇವರಾಜ್ ಅರಸ್‌ರವರು ಏನು ಸ್ಟೇಟ್‌ಮೆಂಟ್ ಕೊಟ್ಟರು ? ಲಂಚ ಏನು ಇದೆ ಅದನ್ನು ಕಡಿಮೆ ಮಾಡುವುದಕ್ಕೆ ನಾವು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದ್ದೇವೆಂದು ಸ್ಟೇಟ್‌ಮೆಂಟ್ ಕೊಟ್ಟರು. ಅದು ಮುಂದುವರಿಯಬೇಕೆಂದು ಅವರು ಏನೂ ಹೇಳಲಿಲ್ಲ. ಅವರು ಯಾವತ್ತೂ ಅದು ಮುಂದುವರಿಯ ಬೇಕೆಂದು ಹೇಳಲು ತಯಾರಿಲ್ಲ. ಮತ್ತೆ ಈ ಮನೆಯ ಸದಸ್ಯರು ಯಾರೇ ಆಗಿರಲಿ ಅವರೂ ಸಹ ಅದು ಮುಂದುವರಿಯಬೇಕೆಂದು ಹೇಳುವುದಕ್ಕೆ ತಯಾರಿಲ್ಲವೆಂದು ನಾನು ಮನವರಿಕೆಮಾಡಿಕೊಂಡಿದ್ದೇನೆ. ಲಂಚ ಹೋಗಬೇಕು ಲಂಚದ ಅಧಿಕಾರಿಗಳು ಯಾರೇ ಇರಲಿ ಅವರನ್ನು ಉಗ್ರವಾದ ಶಿಕ್ಷೆಗೆ ಒಳಪಡಿಸ ಬೇಕೆಂದು ಹೇಳುವುದರಲ್ಲಿ ಯಾವ ಶಾಸಕರಲ್ಲಿಯೂ ಅಥವಾ ಮಂತ್ರಿಗಳಲ್ಲಿಯೂ ಬಿನ್ನಾಭಿಪ್ರಾಯವಿಲ್ಲ ವೆಂದು ಹೇಳಬಯಸುತ್ತೇನೆ. ಅದಕ್ಕೆ ಒಂದು ಬಲವಾದ ಕಾನೂನು ಬರಬೇಕು. ಅದನ್ನು ಎಕ್ಸಾಸ್ಟೀವ್ ಆಗಿ ಮಾಡಬೇಕು ಎಂದು. ನಮ್ಮ ಅಭಿಪ್ರಾಯದಲ್ಲಿ ದುಡ್ಡು ಕೊಡುವವರು ತಪ್ಪಿತಸ್ಥರೆಂದೇ ಪರಿಗಣಿಸಬೇಕು. ಇನ್ನು ಯಾವ ರೀತಿಯಾದ ಫೇವರಿಟಿಸಮ್ ಅಥವಾ ದಾಕ್ಷಿಣ್ಯಕ್ಕೆ ಒಳಗಾಗುವುದೇ ಆಗಲಿ ಅದು ಸಹಿತ ಬ್ರಷ್ಟಾಚಾರವೇ ಎಂದು ನಾನು ಹೇಳುತ್ತೇನೆ. ಕೆಲವು ಸದಸ್ಯರು ಮಾತನಾಡಿ ಕೊಳ್ಳುವಾಗ ನಮ್ಮ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಶ್ರೀಮಾನ್ ಶಾಮಣ್ಣನವರು ತಂದಿರತಕ್ಕಂಥ ನಿರ್ಣಯ ಅದು ಸರಿಯಾದ ರೀತಿಯಲ್ಲಿ ಇಲ್ಲ. ನ್ಯಾಯಾಂಗ ಆಯೋಗ ಬೇಕಾಗಿಲ್ಲ. ಸರ್ಕಾರಕ್ಕೆ ವೃಥಾ ಹಣ ಖರ್ಚಾಗುತ್ತದೆಯೇ ವಿನಃ ಅದರಿಂದ ಏನು ಉಪಯೋಗವಾಗುವುದಿಲ್ಲ. ಸರ್ಕಾರ ಏನು ಗುರಿಯನ್ನು ಇಟ್ಟುಕೊಂಡಿದೆ, ಅದರ ಸಾಧನೆಯಾಗುವುದಿಲ್ಲವೆಂದು ನನ್ನ ಭಾವನೆ ಇಷ್ಟೊಂದು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. Deiuty Speaker.—Sri Konandur Lingappa while speaking used some bighly derogatory words and I order them to be expunged. The words used are against the Prime Minister and they are against the person who is not in a position to defend here. Therefore these words are expunged under Rule 315, fo the Rules of Procedure and Conduct of Business.

† SRI V. N. PATIL (Humnabad).—Deputy Speaker Sir, most of the Hon. Members have already spoken regarding the extent of corruption and what remedy we should adopt. The remedy suggested by Sri Shamanna is to appoint a judicial Committee to go into the question.

ಶ್ರೀಕಾಗೋಡು ತಿಮ್ಮಪ್ಪ.—ತಾವು ಮಾನ್ಯ ಲಿಂಗಪ್ಪನವರು ಹೇಳಿದಂಥ ಮಾತುಗಳನ್ನು ಎಕ್ ಪಂಜ್ ಮಾಡಬೇಕು ಎಂದು ಹೇಳಿದ್ದೀರಿ. ಎಕ್ಸ್‌ಪಂಜ್ ಮಾಡುವಾಗ ಅದರಲ್ಲಿ ಎಷ್ಟು ಭಾಗವನ್ನು ಎಕ್ಸ್‌ಪಂಜ್ ಮಾಡಿ ಎಷ್ಟು ಭಾಗವನ್ನು ಉಳಿಸಿಕೊಳ್ಳಬಹುದು ಎಂದು ನೋಡಬಹುದಿತ್ತು. ಅಂಥ ಅಪಾಯಕಾರಿ ಮಾತು ಏನೂ ಇರಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅದರಲ್ಲಿ ತಪ್ಪು ಏನು ಇದೆ ಹೇಳಿ ?

5-00 P.M.

MR. DEPUTY SPEAKER.—Sri Lingappa, can get emotional and create a storm, there are other people also who can create a tempest, which would surpass the storm. I have already given a Ruling. He may Please sit down. I have already given a decision. Upon that there is no further comment. He is asserting some things which are expunged. He was not present. I cannot compel his to be present. If he is away, I cannot force him to get in. Neither can I send anybody to have him here.

SRI KONANDUR LINGAPPA.—I have not gone out of the Assembly. I took only a cup of water.

MR. DEPUTY SPEAKER.—I Just called the hon. Member's name. Again, he is repeating the same thing. Under Rule 315 I have said I have expunged. Is it not sufficient ? Has he got the Rules of Procedure ? Should I send a copy of it ?

ಶ್ರೀ ಕೋಣಂದೂರು ಲಿಂಗಪ್ಪ.—ಇದರಲ್ಲಿ ತಪ್ಪು ಏನು ಇದೆ ? ನಿಮ್ಮ ಆಜ್ಞೆಯ ಬಗ್ಗೆ ನನ್ನ ಪ್ರಶ್ನೆ ಇಲ್ಲ.

SRI K. B. SIVAIAH.—You are questioning the order of the Chair.

SRI KONANDUR LINGAPPA.—I am not questioning the order. I am not dishonouring the Chair.

MR. DEPUTY SPEAKER.—I order to give him a copy of the Rules of Procedure.

SRI V. N. PATIL.—Sir, when corruption is coming as a tradition it is rather too difficult to remove it in spite of sincre efforts. Some say it is a hoary tradition of corruption perpetuated through generations and centuries together. Some may rightly say so. Is there any provision under the Law,-under the existing law-in the present democratic set up to punish the wrong-doers, the corrupt and the guilty ? The whole tradition about the judicial or legal system that has been left by the Britishers and followed by us in the sume glorious hoary tradition-that glorious tradition of the law-is it insufficient to cope up with the corruption that is coming in this

society ? Was it a glory of the past we should be proud of ? In fact, it was not so. Slavish mentality was developed and our emotions and anger-our justified angers-were crushed· We were given the best of tranquilisers in the form of patience-tolerance-tolerance for all, tolerance against corruption, tolerance against injustice, tolerance against the status quo that has partitioned the humanity that has perpetuated injustice. We have to throw off that yoke of slavery. Political independence we have got, but econmic independence, equality and social justice, we could not get up to this day. Should we be angry for this ? We will fight it with all the might at our disposal. We are entitled to be angry against the existing rotten, corrupt system in the society. We need not be proud about the tradition. Is our Bhdgawadgita and Koran not sufficient ? It might be sufficient as a good tranquiliser to give sound sleep when the mind is disturbed but it does not help a nation which has been crushed and suppressed so far in inequality. I entirely agree with my brother when he says that with two systems of education, one set of students coming from one institution, and another set of students being deprived of that education, inequality is coming right from the beginning. Students develop that tendency right from the beginning, From the beginning inequality is coming. Where is the question of quality ?

I had an occasion to hear one of the retired Judges of the Supreme Court-one of the strongest pillars of one of the total revolutions. He was saying : 'Constitution is being butchered and it has been trampled under the leg of fascism.' Actually, when the Judge of the Supreme Court was speaking, he did not remember it as long as he was the Judge. Why did he not choose to be angry with the injustice done to him then ? Why did he choose to be angry when he was superseded ? My friend has asked that a judicial committee be appointed. I would go one step further. Let there be a judge appointed. When he was superseded he became angry. It was his personal property. It was his vested interest· It is this vested Interest that is ruling and perpetuating injustice in the nation. Some tolerate corruption, some refuse to be angry, some refuse to protest against corruption. One is not angry because one is corrupt. I remember one of the elected members approaching a Minister and asking him, 'Why not dispose of this officer's case' ? He was involved in a case of distributing amounts to destitutes whose houses were burnt in Gulbarga. Some of the Legislators were pleading that it was a minor mistake committed be the officer. The minor mistake was involvement in an amount to the tune of 87,000 rupees. All this was because that officer belonged to a particular community. There was also a case where the Minister and the Divisional Commissioner was bent upon crushing an official because he belonged to a particular community.

It is this democracy of ours; it is this so-called divided society, corrupt society of ours which we wanted to be proud of and we are calling it hoary past, hoary glory and traditions of law. What is the law ? It has served as the hand-made of the class, vested interests the police Department, the judiciary, and everything. It has served as a slave to 0.5% of our population. My Hon. Friend Sri Shamanna wants a judge to be appointed. I whole heartedly support his view provided that judge takes a oath. Therefore, there must be a change in the Constitution to make that judge to swear that I shall stand for the oppressed I shall uphold the dignity of the down-trodden; I shall see that 0.5% of people who are looting, *i.e.*, the smugglers, hoarders, profiteers and those who have contributed very little or nothing for the welfare of the society, should not take a lion's share out of the benefits of the industrial development and the national progress. If that type of judge who is prepared to swear to stand with the 99.5% of the people, I welcome the approach taken by Sri Shamanna. I would like to say that I wanted the judge to be appointed happens to be a people's judge. an elected judge and not a selected judge chosen by our Hon. Minister for Parliamentary Affairs because tomorrow there might be an allegation that the person is related to him.

SRI D. B. KALMANKAR.—What do you mean by the elected judge? Whether he has to go to the constituency as a legislator hasto go or in what way ?

SRI S. M. KRISHNA.—And how much money he can spend to get himself elected ?

SRI V. N. PATIL.—Even for the Students' Union elections, some students will have to spend some times upto Rs. 25,000.

SRI D. B KALMANKAR.—Do you mean to say that they must go to the people ?

SRI A. A. DESAI.—You will have to appint another judge to see how much money he had spent to get himself elected.

SRI V. N. PATIL.—It is not that judiciary as contemplated by Sri T. R. Shamanna to equire into the corruption, to find out ways and means and to submit to the Government a report. I just wanted to say that such a judge must be a judge elected by the people.

MR. DEPUTY SPEAKER. - He has suggested a Judicial Commission

SRI KAGODU THIMAPPA —The Hon. Member said that there must be a judge elected by the people. I just wanted to know by what means and what process that judge can be elected ? If the Hon. Member makes this clear, it would be very helpful.

SRI V. N. PATIL.—It is not a cry in wilderness. I made the suggestion with full seriousness, that the whole judiciary and the set up will have to be changed in order to change the shape of the society The so-called appointed judge cannot swear as I mentioned earlier for the sake of 9.95% of the people. They can deliver judgement for the sake of 0.5% of the people.

MR. DEPUTY SPEAKER.—I think the Hon. Member has putforth his views very clearly. I request him to go to the next point, and he is entitled to be heard with rapt attention.

SRI D. B. KALMANKAR.—We are hearing him with rapt attention.

SRI KAGODU THIMAPPA.—We have asked for some clarification only

MR. DEPUTY SPEAKER.—He can only be interrupted if there is a point of order. If there is an interruption, it should be humourous. It should not be like a cross-examination which confuses the Hon. Member. He has a right to hold his own view. Is it not so? If some Hon. Members want to commit mistakes, they have a right to commit mistakes because in democracy we tolerate them. If there is any more clarifications, the Hon. Member gets further confused.

SRI A. A. DESAI.—He should not confuse others.

MR. DEPUTY SPEAKER,—The best thing is to allow the Hon. Member to assert his own views in his own way and in his own manner.

SRI KAGODU THIMAPPA.—Definitely.

MR. DEPUTY SPEAKER.—Then, why should the hon. Member encroach anybody's right ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ ಈವೊತ್ತು ಈ ಸದನದಲ್ಲಿ ಹೇಳತಕ್ಕಂಥ ವಿಚಾರ ನಮಗೆ ಮಾತ್ರ ಅರ್ಥ ಆದರೆ ಸಾಲದು ಕೇಳಿದವರೆಲ್ಲರಿಗೂ ಅರ್ಥವಾಗಬೇಕು. ಅವರು ಈ ಸದನವನ್ನು ಉದ್ದೇಶಿಸಿ ಏನು ಪ್ರಸ್ತಾಪ ಮಾಡಿದರು ಆ ವಿಚಾರ ನಮಗೆ ಅರ್ಥವಾಗಲಿಲ್ಲಾ. ಅದನ್ನು ಅರ್ಥಮಾಡಿ ಕೊಳ್ಳುವಂತೆ ತಿಳಿಸಿದರೆ ನಮಗೆ ಇನ್ನಷ್ಟು ಹೆಚ್ಚಿನ ತಿಳುವಳಿಕೆ ಬರುತ್ತದೆ. ಅದನ್ನು ವಿಮರ್ಶೆ ಮಾಡಿ ಹೇಳಿರಿ ಅಂತ ಹೇಳಿದೆ. The House will be benefitted if the Hon, Member answers those clarifications.

SRI A. A. DESAI.—It is the million-dollar idea. Let him enlighten.

SRI D. B KALMANKAR.—The Hon. Member has put a very novel idea, a very serious idea before the House and the point is, he wants that Judicial Commission to be appointed. He has not made it clear but anyway, it appears that he wanted the judge of the Commission must be an elected representative. Now, the point is, whether he must be elected by direct voting or he must be elected from the Bar Association or the Legislators should elect him? He must make it clear so that we may be benefitted by the suggestion of the Hon, Member. I would also like to know whether the people of the state, who are the electors i.e., voters must elect him or the Bar Association of all Districts or the High Court Bar Association only,

MR. DEPUTY SPEAKER.—This is troubling the Hon. Member too much.

SRI V. N. PATIL.—I dont get troubled. I dont think I am troubled too much. I feel a little bit strained because I dont have so much stamina to stand for too long. I want to make it clear that I have suggested there must be constitutional changes and every judge whosoever is appointed to administer law and justice must be an elected judge and that judge must be made to swear to stand for the cause of 99.5% of the people and not to 0.5% That was my suggestion. When we are in a democracy, we must have direct elections in democracy. Let the Munsiff be elected from Taluk area and the Magistrate from District area, and the High Court Judges could be elected amongst those elected judges. Corruption cannot be removed in day or two. Mr. Shamanna's resolution is that an enquiry committee headed by a judge should be appointed to go into the matter. Such a judge must be elected by the people. Then only he can have confidence of the people. Otherwise, a judge sitting in ivory towers cannot understand the problems and difficulties of the people and the peasantries. They must be in a position to know the hardships and problems of the people. There are quite large number of instances wherein the laws were not properly implemented. Thogh there is a law according to which the whole trade union movement was not illegal and judges at that time said that we will punish the wrong doers. Similarly, there is a law not to employ children below certain ages. But the judiciary upheld that it is rather infringement to the liberty and freedom of the contractors and that law is being violated. They say that the law passed by the legislature is not related to the employment of children of certain age. So, the tradition which is outmoded and unjust and un-ethical must be changed. The laws which are immoral and retrogressive and which come in the way of progress of the society must be put an end. For that purpose and change it is necessary that those people who are in such school of thought must be changed to suit the modern conditions. The people who advocate patience and tolerence and mutual adjustment should not be given any place. This adjustment could be between two sets of people. Those who loot the national income they can adjust themselves but not the other sections who struggle for their livelihood. It is not as if Communists are progressive they want a change in the society Toachange in society, there must be some revolution which is going to lift the dead bodies of Karnataka in the month of May. In J. P. movement also, there is no manifesto with regard to land distribution The working class will be the owners of the factory soon and the producers will be owners of the profit. Some of my sincere and honest friends are contributing to it out of frustration. The policies and programmes of the Government have not been implemented.

Therefore, masses are under frustration and confusion and this will lead to another revolution of the right reactionaries. Our nation is at the cross roads. If we take the past history so many feudals revolted against Britishers just to safeguard their own feudalism and protect their properties. They wanted to protect their dynasty. But Karnataka people never agitated. Our Kannada nadu is better than any other 'nadu' of India. But, one thing is clear-under the present circumstances, when the nation is at the cross-roads we are entitled to destroy the present outmoded set p and re-write the history once again that cannot be done by the outmoded machinery and practices That is like an old railway bogie which require immediate change. Every official must be screened thoroughly. Not only the legal or judicial officers, but even the executive officers must also under the problems of the people before entering into the service. If he cannot understand and act according to the needs of the people, he must be declared as unfit for the service. I would like to give one examaple at this stge. In my District there is a place called Allura I want the Parliamentary Affairs must note this point. There is a man called Dattatrey, who is poor agriculturist. Once this man was taken to his land-lord's house and made to execute a bond of Rs. 1200 for none of his faults. When he went to the Inspector, the Circle Inspector made him to sit for two days nd execute another bond paper to the tune of Rs. 1500 When enquiry was made it was said that detailed enquiry was being done etc., and notes are moving from one place to another. That poor man could not get any justtce at all. That is how the corruption plays an important cole in harassing poor people. Even with regard to land reforms effecrive implementation cannot be done without the change of outmoded Machineries. What ever progressive laws are passed, they are not properly implemented as we have got a set of air-conditioned mind and capitalistic attitude, Such type of our officialdom should be changed. People have toiled and tolerated too much. So, unless the whole machinery is changed our progress cannot be achieved soon. For such a change an intensive revolution is necessary and courage is necessary. People's society will bring a revolution, unless we take preliminary steps towards the progress of the common man. With these few words, I thank the Chair and conclude my speech.

† ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ, ಈ ಮೊದಲು ಯಾವ ವಿಷಯದ ಮೇಲೆ ಚರ್ಚೆಯಾಗುತ್ತಿದೆ ಎಂಬುದು ನನಗೆ ಗೊತ್ತಿರಲಿಲ್ಲ; ನಂತರ ಶ್ರೀಮಾನ್ ಶಾಮಣ್ಣನವರು ಮಂಡಿಸಿರುವ ನಿರ್ಣಯವನ್ನು ನೋಡಿದ ಮೇಲೆ ವಿಷಯ ಏನು ಎಂಬುದು ತಿಳಿಯಿತು; ಮಾನ್ಯ ಶಾಮಣ್ಣನವರು ಲಂಚವನ್ನು ನಿಲ್ಲಿಸಬೇಕೆಂದು ಏನು ಹೇಳಿದ್ದಾರೆ, ಅದಕ್ಕೆ ನನ್ನ ಬೆಂಬಲ ಕೊಡುತ್ತೇನೆ. ಆದರೆ ಆ ಬಗ್ಗೆ ನ್ಯಾಯಾಂಗ ತನಿಖೆ ಮಾಡಲು ಒಂದು ಆಯೋಗ ರಚನೆ ಮಾಡಬೇಕೆಂದು ಏನು ಹೇಳಿದ್ದಾರೆ, ಅದು ಈ ಕಲಿಯುಗದಲ್ಲಿ ಸಾಧ್ಯವಾಗದ ಮಾತು ಎಂದು ಹೇಳುತ್ತೇನೆ. ಈ ಲಂಚದ ಬಗ್ಗೆ ಕೆಲವರು ಈಗಾಗಲೇ ಟೀಕೆ ಮಾಡಿದ್ದಾರೆ, ೪-೫ ದಿವಸಗಳ ಕೆಳಗೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ಇಂದು ಯಾರು ಕದಿಯುತ್ತಾರೋ ಅವರೇ ಇನ್ನೊಬ್ಬರನ್ನು ಕಳ್ಳ ಕಳ್ಳ ಎಂದು ಹೇಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಂತಹವರನ್ನು ಹಿಡಿದುಕೊಡಿ.

ಶ್ರೀ ಗಟ್ಟಿ ಚಂದ್ರಶೇಖರ್ —ಹಿಡಿಯುವುದಕ್ಕಾಗುವುದಿಲ್ಲ. ಲಂಚ ಲಂಚ ಎಂದು ಹೇಳುತ್ತಾರೆ; ಆದರೆ ಲಂಚ ಎಂಬುದು ಎಲ್ಲಿದೆ ? ಲಂಚ ಎಂಬುದು ಹಿಂದೆ ಇತ್ತು; ಟೇಬಲ್‌ಕೆಳಗೆ ತೆಗೆದುಕೊಳ್ಳುವುದು ಲಂಚ ; ಆದರೆ ಡಿಮ್ಯಾಂಡ್ ಮಾಡಿ ತೆಗೆದುಕೊಳ್ಳುವುದು ಲಂಚವಲ್ಲ ; ಇದು ನಮ್ಮ ಸರ್ಕಾರದ ತಪ್ಪಲ್ಲ ; ಹಿಂದಿನಿಂದಲೂ ಇದನ್ನು ನಡೆಸಿಕೊಂಡು ಬಂದಿದ್ದಾರೆ. ಮಾನ್ಯ ಚಿಕ್ಕೇಗೌಡರ ಹೈಬ್ರಿಡ್ ತಳಿಯ ತರಹ ಈ ಲಂಚವನ್ನು ಬಹಳ ಹಿಂದಿನಿಂದಲೂ ಬೆಳೆಸಿಕೊಂಡು ಬಂದಿದ್ದಾರೆ. ಅದರ ಒಂದು ಫಲ ಈಗ ಕೊಡುತ್ತಿದೆ. ಹಿಂದಿನಿಂದ ಅವರವರ ಅನುಕೂಲಕೋಸ್ಕರ ಅಂದರೆ ಕಳೆದ 28 ವರ್ಷಗಳಿಂದ ಈ ಲಂಚದ ಗಿಡವನ್ನು ಬೆಳೆಸಿಕೊಂಡು ಬಂದರು. ಅದರ ಒಂದು ಫಲವನ್ನು ಇಂದು ನಾವು ಉಣಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಪಂಡಿತ್ ಜವಹರ್‌ಲಾಲ್ ನೆಹರು ಅವರ ಕಾಲದಿಂದ ಹಿಡಿದು ಶ್ರೀಮತಿ ಇಂದಿರಾಗಾಂಧಿಯವರ ಕಾಲದವರೆಗೆ ಬೆಳೆದುಕೊಂಡು ಬಂದಿದೆ.

ಶ್ರೀ ಗಟ್ಟಿ ಚಂದ್ರಶೇಖರ್.—ಇರಲಿ, ತಾವು ಅವರನ್ನೇ ಏತಕ್ಕೆ ಹೇಳುತ್ತೀರಿ ? ಈಗ ಒಂದು ಮಗು ಹುಟ್ಟಿದಾಗ ಅದಕ್ಕೆ Venereal diseases ಬಂದಿದ್ದರೆ ಅದು ಮಗುವಿನ ತಪ್ಪಲ್ಲ ; ಅದರ ತಂದೆ ತಾಯಿ ಮಾಡಿದಂಥ ವ್ಯಭಿಚಾರದ ಫಲ ಅದು. ಅದರಂತೆ, the present position of corruption today is due to the political debauchary of the previous Government ನಮ್ಮ ಸರ್ಕಾರದ ತಪ್ಪು ಇದರಲ್ಲಿ ಏನೂ ಇಲ್ಲ ; ಈಗ ನಾವು ಇಷ್ಟು ಜನರೂ ಚುನಾವಣೆಯಲ್ಲಿ ಏನು ಗೆದ್ದು ಬಂದಿದ್ದೇವೆ, ಅದೂ ಸಹ ಒಂದಲ್ಲ ಒಂದು ರೀತಿಯ ಲಂಚದಿಂದಲೇ ಗೆದ್ದು ಬಂದಿರುವುದು ಮಾನ್ಯ ಕಾಗೋಡು ತಿಮ್ಮಪ್ಪನವರಾಗಲೀ, ಮಾನ್ಯ ಕೋಣಂದೂರು ಲಿಂಗಪ್ಪನವರಾಗಲೀ ಅಥವಾ ನಾನಾಗಲೀ ಒಂದಲ್ಲ ಒಂದು ರೀತಿಯ ಲಂಚದಿಂದಲೇ ಗೆದ್ದು ಬಂದಿರುವುದು ; ಕೇವಲ ದುಡ್ಡು ಕೊಟ್ಟರೇ ಅದು ಲಂಚವಾಗುವುದಿಲ್ಲ ; ಜಾತಿಯ ಹೆಸರು ಹೇಳಿ ಓಟು ಪಡೆಯುವುದೂ ಸಹ ಒಂದು ರೀತಿಯ ಲಂಚವೇ ಆಗುತ್ತದೆ. ಲಿಂಗಾಯಿತರು ಅಂತ ಹೇಳಿ ನಾನು ಓಟು ಪಡೆದಿರಬಹುದು, ಮಾನ್ಯ ಕಾಗೋಡು ತಿಮ್ಮಪ್ಪನವರು ಬೇರೆ ಜಾತಿ ಹೆಸರು ಹೇಳಿ ಓಟು ಪಡೆದಿರಬಹುದು ; ಅದರ ಜೊತೆಗೆ...

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಜಿಲ್ಲೆಯಲ್ಲಿ ಅದೆಲ್ಲಾ ನಡೆಯೋದಿಲ್ಲ.

ಶ್ರೀ ಗಟ್ಟಿ ಚಂದ್ರಶೇಖರ್.—ಅದಿಲ್ಲದಿದ್ದರೆ ಬೇರೆ ರೀತಿಯಲ್ಲಿ ನಡೆದಿರಬಹುದು ; ಜೊತೆಗೆ ಚುನಾವಣೆಯ ಸಂದರ್ಭದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಅದು ಮಾಡುತ್ತೇವೆ, ಇದು ಮಾಡುತ್ತೇವೆಂದು ಜನರಿಗೆ ಏನೇನೋ ಸುಳ್ಳು ಆಶ್ವಾಸನೆಗಳನ್ನು ಕೊಡುತ್ತೇವೆ.

ಉಪಾಧ್ಯಕ್ಷರು.—ಸುಳ್ಳು ಎಂಬ ಪದಕ್ಕೆ ಬದಲು ಅಸತ್ಯ ಎಂದು ಹೇಳಿ.

ಶ್ರೀ ಗಟ್ಟಿ ಚಂದ್ರಶೇಖರ್.—ಸುಳ್ಳು ಎಂಬ ಪದ ಅನ್‌ಪಾರ್ಲಿಮೆಂಟರಿಯಾದರೆ ಅದಕ್ಕೆ ಬೇರೆ ಯಾವ ಪದವನ್ನು ಉಪಯೋಗ ಮಾಡಿದರೆ ಸರಿಯಾಗಿರುತ್ತದೆ ಎಂಬ ಬಗ್ಗೆ ನಾನು ಬಹಳ ದಿವಸಗಳಿಂದ ಕ್ಲಾರಿಫಿಕೇಷನ್ ಕೇಳಬೇಕೆಂದಿದ್ದೆ ; ಈಗ ಮಾನ್ಯ ಅಧ್ಯಕ್ಷರು ಅಸತ್ಯ ಎಂಬ ಪದವನ್ನು ಉಪಯೋಗಿಸಿ ಅಂದರು.

ಶ್ರೀ ಕೋಣಂದೂರು ಲಿಂಗಪ್ಪ.—ಮಿಥ್ಯ ಎಂಬ ಸಂಸ್ಕೃತಪದವನ್ನು ಬೇಕಾದರೆ ಸಹ ಉಪಯೋಗ ಮಾಡಬಹುದು.

ಶ್ರೀ ಗಟ್ಟಿ ಚಂದ್ರಶೇಖರ್.—ಸುಳ್ಳು ಎಂಬ ಪದಕ್ಕೆ ಬದಲು ಸತ್ಯಕ್ಕೆ ದೂರವಾದುದು ಎಂದು ಹೇಳಿದರೂ ಸಹ ಅದೂ ಸುಳ್ಳೇ ಆಗುತ್ತದೆ. ಹೆಂಡತಿ ಅಲ್ಲ, ಮಾವನ ಮಗಳು ಎಂದು ಹೇಳಿದಂತೆ ಆಗುತ್ತದೆ. ನಾವು ಚುನಾವಣೆಯ ಸಂದರ್ಭದಲ್ಲಿ ಜನತೆಗೆ ಏನು ಆಶ್ವಾಸನೆಗಳನ್ನು ಕೊಟ್ಟಿದ್ದೆವೊ ಅವುಗಳ ಪೈಕಿ ಕೆಲವನ್ನು ಜಾರಿಗೆ ತರಲು ನಮಗೆ ಸಾಧ್ಯವಾಗಿಲ್ಲ. ಅದೇರೀತಿ ನಮ್ಮ ವಿರೋಧಪಕ್ಷದ ಸದಸ್ಯರೂ ಸಹ ಚುನಾವಣೆಯ ಸಂದರ್ಭದಲ್ಲಿ ನಮ್ಮ ನಾಯಕರನ್ನು ಮತ್ತು ನಮ್ಮ ಶ್ರೀಮತಿ ಇಂದಿರಾಗಾಂಧಿಯವರನ್ನು ಮನಸ್ಸು ಇಲ್ಲದಿದ್ದರೂ ಸಹ ಜನರಿಂದ ಓಟು ಪಡೆಯಲು ಅವರ ಬಗ್ಗೆ ಸುಳ್ಳು ಹೇಳಿ, ಅವರನ್ನು ಬೈದು, ಆ ಮೂಲಕ ಕೆಲವರು ಗೆದ್ದು ಇಲ್ಲಿ ಬಂದು ಕೂತಿದ್ದಾರೆ. ಅದೂ ಒಂದು ರೀತಿಯ ಲಂಚವೇ ಆಗಿದೆ ನಾವು ಲೆಕ್ಕ ಕೊಟ್ಟಿರುವುದೂ ಲಂಚವೇ, ಈ ಲಂಚವನ್ನು ಹೋಗಲಾಡಿಸಲು ಕ್ರಮ ಕೈಕೊಳ್ಳುವ ಬಗ್ಗೆ ಒಂದು ಆಯೋಗ ನೇಮಕ ಮಾಡಬೇಕೆಂದರೆ, ಅದರಲ್ಲಿ ಕೆಲಸ ಮಾಡುವವರನ್ನು ಎಲ್ಲಿಂದ ತರುವುದು ? ಅಂತಹವರು ಸಿಗುತ್ತಾರೆಂಬುದು ನನಗೆ ಅನುಮಾನ, ಸಿಕ್ಕಿದರೂ ಸಹ ಅವರನ್ನೇ

ಅಡ್ಡದಾಗಿ ಕೆಲವರು ಎಳೆದರೆ ಏನು ಮಾಡುವುದು ? ಈಗಾಗಲೇ ಅನೇಕ ಆಯೋಗಗಳು ರಚನೆಯಾಗಿವೆ. ಆದರಿಂದ ಏನು ಲಾಭವಾಗಿದೆ ಎಂಬುದನ್ನು ಸಹ ನೋಡುತ್ತಿದ್ದೇವೆ. ಈಗ ಮತ್ತೆ ಎಲೆಕ್ಷನ್ ಬಗ್ಗೆ ಸುಧಾರಣೆ ತರಲು ಒಂದು ಆಯೋಗ ನೇಮಕ ಮಾಡಬೇಕು ಎನ್ನುವುದಾದರೆ, ಎಲೆಕ್ಷನ್ ಮೂಲವೇ ಲಂಚವಾಗಿರುವಾಗ, ಮತ್ತು ಒಂದಲ್ಲ ಒಂದು ರೀತಿಯ ಲಂಚದಿಂದಲೇ ಎಲ್ಲರೂ ಗೆದ್ದು ಬಂದಿರುವಾಗ, ಇನ್ನು ಲಂಚದ ನಿರ್ಮೂಲನ ಯಾವ ರೀತಿ ಆಗುತ್ತದೆ? ಪುರಾಣ ಕಾಲದಲ್ಲಿ ಸಹ ಶ್ರೀ ಕೃಷ್ಣಪರಮಾತ್ಮನು ಯುದ್ಧದಲ್ಲಿ ಗೆಲ್ಲಲು ಧರ್ಮರಾಯನ ಬಾಯಿಂದ ಅಶ್ವತ್ಥಾಮಃ ಹತಃ ಕುಂಜರಃ ಎಂದು ಸುಳ್ಳು ಹೇಳಿಸಿದ. ಈಗ ಒಂದು ಆಯೋಗ ಮಾಡುತ್ತೇವೆ, ಅದರ ಮೂಲಕ ಲಂಚವನ್ನು ನಿಲ್ಲಿಸುತ್ತೇವೆಂದರೆ ಅದು ಒಂದು ರೀತಿಯ ಭ್ರಾಂತಿಯಾಗುತ್ತದೆ. ಈಗ ವಿರೋಧ ಪಕ್ಷದವರು ಇಲ್ಲಿ ಮಾತನಾಡುವಾಗ ಸರ್ಕಾರವನ್ನು ನಾನಾ ರೀತಿಯಿಂದ ಟೀಕೆ ಮಾಡುತ್ತಾರೆ. ಬೇಕಾದಷ್ಟು ಬೈಯುತ್ತಾರೆ. ತಕ್ಷಣವೇ ಈ ಕಡೆಗೆ ಬಂದು ಮಂತ್ರಿಗಳ ಹತ್ತಿರ ಕೂತುಕೊಂಡು ತಮ್ಮ ಕೆಲಸಗಳನ್ನು ಮಾಡಿಸಿ ಕೊಳ್ಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದಕ್ಕಾಗಿಯೋ ಮಂತ್ರಿಗಳು ಇರುವುದು.

ಶ್ರೀ ಗಟ್ಟಿ ಚಂದ್ರಶೇಖರ್.—ಸರ್ಕಾರವನ್ನು ಟೀಕೆ ಮಾಡುವವರು ಕಾನೂನು ಪ್ರಕಾರ ಮಂತ್ರಿಗಳಿಗೆ ಕಾಗದ ಬರೆದು ತಮ್ಮ ಕ್ಷೇತ್ರದ ಕೆಲಸಗಳನ್ನು ಮಾಡಿಸಿಕೊಳ್ಳಬೇಕು, ಆದರೆ ಈಗ ಆ ರೀತಿ ಮಾಡದೆ ಈ ಕಡೆಗೆ ಬಂದು ಮಂತ್ರಿಗಳ ಪಕ್ಕದಲ್ಲಿ ಕುಳಿತುಕೊಂಡು ಅವರ ಕಿವಿಯಲ್ಲಿ ಹೇಳಿ ಮಾಡಿಸಿಕೊಳ್ಳುತ್ತಿದ್ದಾರೆ. ಇದು ಸರಿಯೇ ? ಈ ಹಿಂದೆ ಪುರಾಣದಲ್ಲಿ ರೇಣುಕೆಯು ದೇವತೆಗಳು ನಡೆಸುತ್ತಿದ್ದ ಸರಸಸಲ್ಲಾಪಗಳನ್ನು ನೋಡಿದ್ದರಿಂದ ಅವಳ ವ್ರತಕ್ಕೆ ಭಂಗ ಬಂತು ಎಂಬ ಕಾರಣದಿಂದ ಜಮದಗ್ನಿಯು ಹೆಂಡತಿಯನ್ನೇ ಕೊಲ್ಲುವಂತೆ ಮಗನಿಗೆ ಹೇಳಿದ; ಅವಳಲ್ಲಿ ಯಾವ ಒಂದು ದುರ್ಭಾವನೆ ಇಲ್ಲದಿದ್ದರೂ ಅವಳನ್ನು ಕೊಲ್ಲುವಂತೆ ಮಗನಿಗೆ ಹೇಳಿದ; ಆದರಂತೆ ಈಗ ಈ ಲಂಚವನ್ನು ನಿಲ್ಲಿಸುವುದಕ್ಕೆ ಇರುವುದು ಒಂದೇ ಒಂದು ಮಾರ್ಗವೆಂದರೆ ನಾವು ಮೊದಲು ಶುದ್ಧವಾಗಿರುವುದನ್ನು ಕಲಿಯಬೇಕು. ಇವೊತ್ತು ನಾವು ಕೇವಲ ಭಾಷಣ ಮಾಡಿಕೊಂಡು ಒಬ್ಬರ ಮೇಲೆ ಇನ್ನೊಬ್ಬರು ಆರೋಪ ಮಾಡಿ, ಯಾರು ಸೈಟ್ ತೆಗೆದುಕೊಂಡಿರುತ್ತಾರೋ, ಅವರೇ ಇನ್ನೊಬ್ಬರು ಸೈಟ್ ತೆಗೆದುಕೊಂಡರು ಎಂದು ಹೇಳುವುದು, ಯಾರು ಕಾರು ಪರ್ಮಿಟ್ ತೆಗೆದುಕೊಂಡು ನಂತರ ಅದನ್ನು ಮಾರಿಕೊಂಡಿರುತ್ತಾರೋ ಅವರೇ ಇನೊಬ್ಬರ ಮೇಲೆ ಆರೋಪ ಮಾಡುವುದು ಸರಿಯಲ್ಲ, ಬಸವಣ್ಣನವರು ಏನು ಹೇಳಿದ್ದಾರೆಂದರೆ:—

"ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿ ಕೊಳ್ಳಿ, ನಿಮ್ಮ

ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮ

ದೇವ" ಎಂದು ;

ಆದರಂತೆ ನಾವು ಮೊದಲು ಶುದ್ಧರಾದರೆ ನಂತರ ಬೇರೆಯವರೆಲ್ಲರೂ ಶುದ್ಧರಾಗುತ್ತಾರೆ ಆಗ ಲಂಚವೂ ಸಹ ನಿಲ್ಲುತ್ತದೆ,

ಇನ್ನು ಕೊನೆಯದಾಗಿ ಈ ಲಂಚ ಮತ್ತು ಭ್ರಷ್ಟಾಚಾರ ನಿಲ್ಲಬೇಕು ಎನ್ನುವುದರಲ್ಲಿ ನಿಮ್ಮಷ್ಟೇ ನನಗೂ ಆಸಕ್ತಿ ಇದೆ. ಇದನ್ನು ನಿಲ್ಲಿಸುವುದಕ್ಕೆ ಇರತಕ್ಕಂಥ ಒಂದೇ ಒಂದು ಮಾರ್ಗವೆಂದರೆ, ನಾವು ಬೇರೆಯವರಿಗೆ ಹೇಳುವುದಕ್ಕೆ ಮೊದಲು, ನಾವು ೨೦೮ ಜನರು ಇಲ್ಲಿ ಏನಿದ್ದೇವೆ, ನಾವುಗಳು ಮೊದಲು ನಮ್ಮ ಆತ್ಮಶೋಧನೆ ಮಾಡಿಕೊಳ್ಳಬೇಕು. ನಾವು ಇಲ್ಲಿಗೆ ಬಂದಾಗ ಸತ್ಯದಿಂದ ನಡೆದುಕೊಳ್ಳುತ್ತೇವೆಂದು ಪ್ರಮಾಣವಚನ ಸ್ವೀಕಾರ ಮಾಡಿದ್ದೇವೆ ಆದರಂತೆ ನಾವುಗಳೆಲ್ಲ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇ ಆದರೆ ಇದನ್ನು ನಾವು ಖಂಡಿತ ನಿಲ್ಲಿಸಬಹುದು; ಅಷ್ಟೇ ಹೊರತು, ಇದನ್ನು ನ್ಯಾಯಾಂಗ ತನಿಖೆಯಿಂದಾಗಲೀ, ಅಥವಾ ಬೇರೆ ಯಾವ ತನಿಖೆಯಿಂದಾಗಲಿ ಇದು ನಿಲ್ಲುವುದಿಲ್ಲ ; ಆದಕಾರಣ ಈ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದೆಂದು ಮಾನ್ಯ ಶಾಮಣ್ಣನವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಮಾತನಾಡುವಾಗ ತಮ್ಮಲ್ಲಿದ್ದ ಹಣವನ್ನೇ ಖರ್ಚು ಮಾಡಿ ಚುನಾವಣೆಯಲ್ಲಿ ಗೆದ್ದು ಬಂದಿರುವುದಾಗಿ ಹೇಳಿದರು. ಅವರ ಹಣವನ್ನೇ ಖರ್ಚು ಮಾಡುವುದು ಸಹ ಒಂದು ರೀತಿಯ ಲಂಚವೇ; ಅದು ಮಾಡಿಫೈ ಲಂಚ; ಜೊತೆಗೆ ನಿಮ್ಮವರು ಯಾರೋ ನಿಮ್ಮ ಪರವಾಗಿ ಹಣ ಖರ್ಚು ಮಾಡಿದರೆ ಅದು ಸಹ ಲಂಚ, ಮುಖ್ಯವಾಗಿ ವಿಶಾಲ ಮನೋಭಾವನೆಯಿಂದ ಈ ಸಮಾಜ ಮುಂದುವರೆಯಬೇಕು, ಈ ಲಂಚ ನಿಲ್ಲಬೇಕು ಎಂದು ನಾವು ಮನಸ್ಸು ಮಾಡಿಕೊಂಡು ಕೆಲಸ ಮಾಡಿದ್ದೇ ಆದರೆ ಅದು ತಾನಾಗಿಯೇ ನಿಲ್ಲುತ್ತದೆ. ಆ ರೀತಿ ಮಾಡದೆ ಅದಕ್ಕೆ ಒಂದು ಆಯೋಗ ರಚನೆ ಮಾಡಬೇಕೆಂದು ಹೊರಟರೆ, ಅದಕ್ಕೆ ಪ್ರತ್ಯೇಕವಾದ ಒಂದು ಸೆಕ್ರೆಟೇರಿಯಟ್ ಆಗ ಬೇಕಾಗುತ್ತದೆ, ಅಲ್ಲಿ ಕೆಲಸ ಮಾಡಲು

ಸ್ಟಾಫ್‌ನ್ನು ನೇಮಕ ಮಾಡಬೇಕಾಗುತ್ತದೆ, ಈ ರೀತಿ ಅದು ಹನುಮಂತನ ಬಾಲದಂತೆ ಬೆಳೆದುಕೊಂಡು ಹೋಗುತ್ತದೆ; ದುಡ್ಡು ಸಹ ವಿಪರೀತ ಖರ್ಚಾಗುತ್ತದೆ. ಅದಕ್ಕೆ ಬದಲು ನಮಗೆ ಈಗ ಕೊಡುತ್ತಿರುವ ೩೧ ರೂಪಾಯಿ ಡಿ.ಎ. ಅನ್ನು ೪೧ ರೂಪಾಯಿಗಳಿಗೆ ಹೆಚ್ಚು ಮಾಡದರೆ ನಾವು ಇನ್ನೂ ನ್ಯಾಯವಾಗಿ ಇರಬಹುದು; ಇನ್ನೂ ಚೆನ್ನಾಗಿ ಕೆಲಸ ಮಾಡಬಹದು, ಆದಕಾರಣ ಮಾನ್ಯ ಶಾಮಣ್ಣನವರು ಅವರ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಶಾಮಣ್ಣನವರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯ ಏನಿದೆ ಇದನ್ನು ಕಾರ್ಯಗತ ಮಾಡುವುದಕ್ಕೆ ಆಗುತ್ತದೆಯೇ ಎಂದು ನನ್ನ ಮೊದಲನೆಯ ಸಂದೇಹ. ಮತ್ತು ಈ ವಿಚಾರದಲ್ಲಿ ನ್ಯಾಯಾಂಗ ತನಿಖೆ ಯಾಗಬೇಕು ಎಂದು ಹೇಳಿದ್ದಾರೆ. ಇದುವರಿಗೂ ಭಾಷಣ ಮಾತನಾಡಿದಂತಹ ಅನೇಕ ಸ್ನೇಹಿತರು ಬಹಳ ಚೆನ್ನಾಗಿ ಹೇಳಿದರು. ಅವರು ಲಂಚಾವತಾರ, ಭ್ರಷ್ಟಾಚಾರ; ಆಚಾರ ವಿಚಾರಗಳ ಬಗ್ಗೆ ಹೇಳಿದ್ದಾರೆ. ನನಗೆ ಅನಿಸುತ್ತದೆ. ಇದಕ್ಕೆ ಮೂಲ ಕಾರಣವೇನು ಎಂದು. ಲಂಚದ ಮಹತ್ವ ಆದರಿಂದ ಆಗತಕ್ಕ ಅನುಕೂಲ ಮತ್ತು ಅನಾನುಕೂಲ ಎಲ್ಲರಿಗೂ ಗೊತ್ತಿದೆ ಈಗ ಹೊಸದಾಗಿ ಭಾಷಣ ಮಾಡಿ ಎಲ್ಲವನ್ನೂ ತಿದ್ದುವುದಕ್ಕೆ ಆಗುವುದಿಲ್ಲ. ಇದಕ್ಕೆ ಬೇಕಾದಷ್ಟು ನಿದರ್ಶನಗಳು ಇವೆ. ಈ ಬಗ್ಗೆ ಪುರಾತನ ಕಾಲ ದಿಂದಲೂ ಬೋಧನೆ ಮಾಡಿಕೊಂಡು ಬಂದೇ ಬಿದಿದ್ದಾರೆ. ೧೯೭೫ನೇ ಏಪ್ರಿಲ್ ತಿಂಗಳು ೭ನೇ ತಾರೀಖಿನವರೆಗೂ ಈ ಬಗ್ಗೆ ಹೇಳಿಕೊಂಡು ಬಂದಿದ್ದಾರೆ. ಹೀಗಿರುವಾಗ ಈ ಲಂಚದ ನಿರ್ಮೂಲನ ಏತಕ್ಕೆ ಆಗಲಿಲ್ಲ ? ನನಗೆ ಅನಿಸುತ್ತದೆ, ನಮ್ಮಲ್ಲಿ ನೈತಿಕ ಗುಣ ''ಮಾರಲ್ ಕ್ಯಾರೆಕ್ಟರ್ ಅಂಡ್ ಬೇಸಿಕ್ ಹಾನೆಸ್ಟಿ'' ಎಂದು ಏನು ಹೇಳುತ್ತಾರೆ ; ಅದು ಸ್ವಲ್ಪ ಕಡಿಮೆಯಾಗುತ್ತಾ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಕಾರಣ ನಮ್ಮದೇಶ ರಾಮರಾಜ್ಯ ಆಗಬೇಕು, ಎಂದು ದಾಸರ ಕೃತಿಗಳು ಪುರಂದರ ದಾಸರು, ಕನಕದಾಸರು ಎಲ್ಲರೂ ಹೇಳಿದ್ದಾರೆ. ಮತ್ತು ಹಾಡಿದ್ದಾರೆ ಆದರೂ ಸಹ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಬಹಳ ತೊಂದರೆಯಾಗಿದೆ. We are living in an age of science and technology. ಇದು ನಾವು ಆಧುನಿಕ ಯುಗದಲ್ಲಿದ್ದೇವೆ ಯೋಜನಾ ಯುಗದಲ್ಲಿ ದ್ದೇವೆ. ಹಿಂದಿನ ಕಾಲದ ವಾತಾವರಣಕ್ಕೂ, ಈಗಿನಕಾಲದ ವಾತಾವರಣಕ್ಕೂ ಬೇರೆಯಾಗಿದೆ ಎಂಬು ದನ್ನು ಮರೆಯಬಾರದು. ಹೀಗಿರುವುದರಿಂದ ಲಂಚ ಎನ್ನುವ ಪದವನ್ನು ನಾವು ಏನು ಉಪಯೋಗಿಸು ತ್ತೇವೆ ಇದರಲ್ಲಿ ಇಟ್ ವೇರೀಸ್ ಇನ್ ಡಿಗ್ರಿ ಎಂದು ಹೇಳಬಹುದು ಎಲ್ಲಿಯವರೆಗೆ ಮನುಷ್ಯ ಚೆನ್ನಾಗಿ ಬೆಳೆಯಬೇಕೆಂದು ಯೋಚನೆ ಮಾಡುತ್ತಾನೆ ಆಗ ಒಂದಲ್ಲ ಎಂದು ರೀತಿಯಲ್ಲಿ ಅವನಿಗೆ ಹಣ ಅಧಿಕಾರ ಇರಬೇಕು. ಆಗ ಲಂಚ ನೆಪೋಟಿಜಂ, ಫೇವರಿಟಿಜಂ, ಇವು ಯಾವುದಾದರೂ ಒಂದು ರೂಪದಲ್ಲಿ ಇರಬೇಕು. ನಾವು ಇಂದು ಪರ್ವಕಾಲದಲ್ಲಿದ್ದೇವೆ, ವಿಜ್ಞಾನಯುಗದಲ್ಲಿದ್ದೇವೆ. ಆದಕಾರಣ ಮನುಷ್ಯ ನಿಗೆ ಆಸ್ತಿಬೇಕು, ಸ್ಥಾನಬೇಕು. ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರತಕ್ಕ ಜನ ನಾವು. ಪ್ರಜಾಪ್ರಭುತ ಮೂರು ಆಧಾರಗಳ ಮೇಲೆ ನಡೆಯುತ್ತದೆ. ಅಂದರೆ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಈ ಅಂಗಗಳ ಪ್ರಜಾಪ್ರಭುತ್ವವನ್ನು ನಾವು ಒಪ್ಪಿಕೊಂಡಿದ್ದೇವೆ ಅದನ್ನು ಕಾರ್ಯಗತ ಮಾಡುವುದಕ್ಕೆ ನಾವು ಬೇಕಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಮಿತ್ರರೂ ಸಹ ಅದನ್ನು ಒಪ್ಪಿಕೊಂಡಿದ್ದಾರೆ. ಈಗ ನಮ್ಮಲ್ಲಿ ಪೊಲಿಟಿಕಲ್ ಇಂಡಿಪೆಂಡೆನ್ಸ್ ಇದೆ. ಎಕನಾಮಿಕ್ ಇಂಡಿಪೆಂಡೆನ್ಸ್ ಇಲ್ಲ. ಅದು ಆಗಬೇಕಾದರೆ ನಾವು ಕಾರ್ಯಪ್ರವೃತ್ತರಾಗಬೇಕು. ಅದನ್ನು ಸಾಧನೆ ಮಾಡುವ ಬಗ್ಗೆ ಅನೇಕ ಕಮಿಷನ್‌ಗಳನ್ನು ಮಾಡಿದ್ದಾರೆ. ಸಂತಾನಂ ಕಮಿಟಿ ಮಾಡಿದ್ದರು. ಬ್ಯಾಕ್‌ವಡ್ ಕಮಿಷನ್ ಮಾಡಿದ್ದಾರೆ. ಹೀಗೆ ಬೇಕಾದಷ್ಟು ಕಮಿಷನ್ ಮಾಡಿದ್ದಾರೆ. ಒಟ್ಟಿನಲ್ಲಿ ಮನುಷ್ಯನಿಗೆ ಸಾಮಾಜಿಕ ನ್ಯಾಯ ಸಿಕ್ಕಬೇಕು. ಇದು ಎಲ್ಲಿ ಸಿಕ್ಕುತ್ತದೆ? ಈಗ ಮೊದಲನೆಯದಾಗಿ ಲಂಚವನ್ನು ಇರಾಡಿಕೇಟ್ ಮಾಡುವುದಕ್ಕೆ ಸಾಧ್ಯವಿದೆಯೇ? ಸಾಧ್ಯವಿದೆ. ಹೇಗೆ ? ಪ್ರಯತ್ನ ಮಾಡಬೇಕು ಮತ್ತು ಸಲಹೆಗಳನ್ನು ಕೊಡಬೇಕು ಇದಕ್ಕೆ ಒಂದು ಸಾಮಾಜಿಕ ಕ್ರಾಂತಿ ಆಗಬೇಕು. ನಮ್ಮ ಸಂಸ್ಕೃತಿಯ ಪ್ರಕಾರ, ನಮ್ಮ ಹಿನ್ನಲೆಯ ಪ್ರಕಾರ ನಮ್ಮ ಚರಿತ್ರೆಯ ಪ್ರಕಾರ we belive in Revolution though evolution. ನಾವು ನಮ ಸಂಸ್ಕೃತಿಯನ್ನು, ನಮ್ಮ ಒಂದು ದೊಡ್ಡ ತನವನ್ನು ಒಂದಲ್ಲ ಒಂದು ರೀತಿಯಲ್ಲಿ ಉಳಿಸಿಕೊಂಡು ಬಂದಿದ್ದೇವೆ. ಆದರೆ ಈ ಲಂಚದ ಬಗ್ಗೆ ಯೋಚನೆ ಮಾಡಿದಾಗ ಈ ನಮ್ಮ ಚುನಾವಣೆಯಿಂದ ಮೊದಲ್ಗೊಂಡು ಎಷ್ಟೋ ಜನ ಹಣವನ್ನು ಕೊಟ್ಟು ವೋಟು ಪಡೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಅನೇಕ ಇಲಾಖೆಗಳಲ್ಲಿ ಲಂಚಗುಳಿತನ ನಡೆಯುತ್ತಿದೆ ಎಂದು ಹೇಳುತ್ತಾರೆ. ಪೋಲೀಸ್ ಇಲಾಖೆಯಲ್ಲಿ, ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಸಬ್ ರಿಜಿಸ್ಟ್ರಾರ್ ಇಲಾಖೆಯಲ್ಲಿ, ಇನ್ನೂ ಮುಂತಾದ ಇಲಾಖೆಯಲ್ಲಿ ಲಂಚಗುಳಿತನ ಇದೆಯೆಂದು ಹೇಳುತ್ತಾರೆ. ಆದರೆ ಇಲ್ಲಿ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿ ಗಳು ನೌಕರರು ಎಲ್ಲಿಂದ ಬಂದರು ? ಇವೊತ್ತಿನದಿವಸ ಈ ಸದನದಲ್ಲಿ ಕೆಲಸ ಮಾಡತಕ್ಕ ನಾವುಗಳು ಯಾರು ಎಲ್ಲಿಂದ ಬಂದಿದ್ದೇವೆ ! ನಾವೆಲ್ಲರೂ ಒಂದೇ ಸಮಾಜದಲ್ಲಿಬಂದಿರತಕ ಜನ ಅಲ್ಲವೇನು ?

ಡೇವಿಡ್, ಜಾನ್‌ಸನ್, ಜೋಸೆಫ್ ಅವರೆಲ್ಲರೂ ನಮ್ಮ ಅಣ್ಣತಮ್ಮಂದಿರು. ಅಕ್ಕತಂಗಿಯರು. ನಾವುಗಳು ಯಾರೂ ಇಂಗ್ಲೆಂಡಿನಿಂದ ಬಂದಿಲ್ಲ ಲಂಚವನ್ನು ಕೊಡುವವರೂ ನಮ್ಮವರೇ ಲಂಚವನ್ನು ತೆಗೆದುಕೊಳ್ಳುವವರು ನಮ್ಮವರೇ. ಹಣವನ್ನು ಕೊಟ್ಟವರು, ಇಷ್ಟು ಹಣವನ್ನು ಕೊಟ್ಟೆ ಎಂದು ಹೇಳುವುದಿಲ್ಲ ಹಣ ಕೊಟ್ಟವರು ಯಾವುದಾದರೂ ಒಂದು ಉಪಯೋಗವನ್ನು ಪಡೆದುಕೊಂಡೇ ಪಡೆದು ಕೊಳುತ್ತಾರೆ ಯಾರೂ ಅನಾವಶ್ಯಕವಾಗಿ ಲಂಚವನ್ನು ಕೊಡುವುದಿಲ್ಲ ಲಂಚವನ್ನು ಕೊಡುವವರು ಸದುದ್ದೇಶದಿಂದ ಕೊಡುತ್ತಾರೆಯೇ ವಿನಾ ದುರುದ್ದೇಶದಿಂದ ಕೊಡುವುದಿಲ್ಲ. ಈಗ ಸಾಮಾನುಗಳ ಬೆಲೆ ಏರಿಕೆಯಾಗಿದೆ. ಹಣ ಬೇಕು. ಹಣವನ್ನು ಎಲ್ಲಿಂದ ತರಬೇಕು ? ಕೆಲವರು ನಿಷ್ಠಾವಂತ ಅಧಿಕಾರಿಗಳು ಇದ್ದಾರೆ. ನಾನು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತೇನೆ. ಎಲ್ಲರೂ ಲಂಚತೆಗೆದುಕೊಳ್ಳುತ್ತಾರೆ ಎಂದು ನಾನು ಹೇಳುವುದಿಲ್ಲ. ಅಧಿಕಾರಿಗಳಿಗೂ ಭೂತದಯೋ ಪಶ್ಚಾತ್ತಾಪ ಇದೆ. ಎಲ್ಲರೂ ಲಂಚವನ್ನು ತೆಗೆದುಕೊಳ್ಳುವುದಿಲ್ಲಿ ಮತ್ತು ಅಷ್ಟು ಸುಲಭವಾಗಿ ಲಂಚವನ್ನು ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ ಬ್ಲಾಕ್ ಮಾರ್ಕೆಟ್ ಮಾಡತಕ್ಕ ಜನ ಕಪ್ಪು ಹಣವನ್ನು ಬಿಳಿ ಮಾಡತಕ್ಕವರು, ಸ್ಮಗ್ಲರ್ಸ್ ಸಮಾಜ ದ್ರೋಹಿಗಳು, ಎಲ್ಲರೂ ಹುಟ್ಟಿಕೊಂಡು ಮಾರಲ್ ಕ್ಯಾರೆಕ್ಟರ್ ಹೊರಟು ಹೋಗಿದೆ. ಅವರು ಬಹಿರಂಗವಾಗಿ ಹೇಗೆ ಹಣವನ್ನು ಮಾಡಿಕೊಳ್ಳುವುದಕ್ಕೆ ಆಗುತ್ತದೆ ? ಆದ್ದರಿಂದ ಅವರು ಬಹಳ ಬುದ್ಧಿವಂತಿಕೆಯಿಂದ ಹಣವನ್ನು ಸಂಪಾದನೆ ಮಾಡುತ್ತಾರೆ. ಹಾಗೆಯೇ ಹುಷಾರಾಗಿ ಖರ್ಚು ಮಾಡುತ್ತಾರೆ.

ಹೀಗಿರುವಾಗ ನಾನು ಒಂದು ಟ್ರಾನ್ಸ್‌ಫರ್, ಒಂದು ಪ್ರೊಮೋಷನ್ ಮತ್ತು ಒಂದು ಕೆಲಸದ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ವಿವರಗಳನ್ನು ಇಷ್ಟಪಡುವುದಿಲ್ಲ. ಅವರು ಕೆಲಸ ಮಾಡತಕ್ಕ ಕಾಲದಲ್ಲಿ ಯಾವುದೋ ಒಂದು ನಾನು ಪುಸ್ತಕವನ್ನು ಓದುತ್ತಿರುತ್ತಾರೆ. ಹೀಗಿರುವಾಗ ಅದರಲ್ಲಿ ದಕ್ಷತೆ, ದಕ್ಷತೆ ಎಂದು ಹೇಳಿದರೆ ಅದು ಎಲ್ಲಿ ಸಿಗುತ್ತದೆ ? ಮಾನ್ಯ ಶ್ರೀ ವಿಶ್ವೇಶ್ವರಯ್ಯನವರು ದಕ್ಷರು ಎಂದು ಕೇಳಿದ್ದೆ. ಎಫಿಷಿಯನ್ಸಿ ಅಂತಹವರಲ್ಲಿ ಮಾತ್ರ ಇರುತ್ತದೆಂದು ಹೇಳಬಹುದು. ಯಾವ ಮನುಷ್ಯನಿಗೆ ಮಾರಲ್ ಸ್ಟ್ಯಾಂಡರ್ಡ್ ಇರುವುದಿಲ್ಲವೋ ಅವರಿಗೆ ದಕ್ಷತೆ ಎಲ್ಲಿ ಇರುತ್ತದೆ ? ನಮ್ಮಲ್ಲಿ ಒಂದು ಶಕ್ತಿ, ಯೋಗ್ಯತೆ ಮುಂಕ್ತಿ ಯಾವಾಗ ಬರುತ್ತದೆಂದರೆ ನಮ್ಮ ಆತ್ಮಶುದ್ಧಯಾಗಿರಬೇಕು. ನಾನು ಈ ವಾದವನ್ನು ಇಲ್ಲಿ ಹೇಳಬೇಕೆಂದಿಲ್ಲ. ಇದು ರಾಜಕೀಯ ತಂತ್ರವೆಂದು ನಾನು ಹೇಳುತ್ತಿದ್ದೇನೆ ಒಂದು ಉದಾಹರಣೆ ಹೇಳುತ್ತೇನೆ. ಮೊನ್ನೆ ದಿವಸ ಬೆಂಗಳೂರು ವಾಟರ್ ಸಪ್ಲೈ ಬಗ್ಗೆ ಎಷ್ಟರಮಟ್ಟಿಗೆ ಭ್ರಷ್ಟಾಚಾರವಾಗಿದೆಯೆಂದು ಆರೋಪಣೆ ಮಾಡಿದರು ಇದು ನಮ್ಮ ಪಕ್ಷಕ್ಕೆ ಮಸಿ ಬಳಿಯುವುದಕ್ಕೆ ಇರಬಹುದೆಂದು ಸಂದೇಹ ಬಂದಿದೆ ಹೀಗಿರುವಾಗ ನಾವು ಸಾಧ್ಯವಾದಮಟ್ಟಿಗೂ ನಿಷ್ಠಾವಂತರಾಗಬೇಕು. ದೇಶದ ಹಿತದೃಷ್ಟಿಯಿಂದ ಎಲ್ಲ ಕೆಲಸಗಳನ್ನೂ ನಿಷಪಕ್ಷಪಾತವಾಗಿ ನಿರ್ವಹಿಸಬೇಕಾಗುತ್ತದೆ. ಅದರಲ್ಲಿ ವ್ಯತ್ಯಾಸಮಾಡುವುದಕ್ಕಾಗುವುದಿಲ್ಲ. ಲಂಚಗುಳಿತನವನು ಕಡಿಮೆಮಾಡಬೇಕು. ನಾವು ಅದನ್ನು ನಿರ್ಮೂಲನಮಾಡುತ್ತಿದ್ದೇವೆಂದು ಹೇಳಿದ್ದು ಸತ್ಯವಲ್ಲ. ಮಾನ ಶ್ರೀ ಶಾಮಣ್ಣನವರು ಯಾವ ಒಂದು ನಿರ್ಣಯವನ್ನು ಇಲ್ಲಿ ತಂದಿದ್ದಾರೋ ಅದನ್ನು ವಾಪಸ್ಸು ತೆಗೆದು ಕೊಳ್ಳಬೇಕೆಂದು ಹೇಳಿ, ನನಗೆ ಅಧ್ಯಕ್ಷರು ಇಲ್ಲಿ ಮಾತನಾಡುವುದಕ್ಕೆ ಸಮಯವನ್ನು ಕೊಟ್ಟಿರುವುದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇವೆ.

MR. DEPUTY SPEAKER.—Now the Hon. Minister for Industries will make a statement regarding the Cement Control.

STATEMENT BY THE HON'BLE MINISTER FOR INDUSTRIES AND PARLIAMENTARY AFFAIRS REGARDING CEMENT CONTROL

SRI S. M. KRISHNA.—Till very recently the demand for cement had been in excess of production and added to this there has been commitments for export of cement from the country. In this context, it was found necessary to impose cement control for a systematic distribution of this commodity which was becoming scarce. However, subsequently improvements in productions were noticed. Government of India also brought about certain restriction on the use of cement for categories of construction like Hotels, Theatres,